# ಒಂದು ಪ್ರಸ್ತಾವನೆ

## ಯೆರೂಸಲೇಮ ಮತ್ತು ಅದರಿಂದಾಚೆಗೆ

ಕ್ರಿಸ್ತನ ಪುನರುತ್ಥಾನದ ನಂತರದ ಪ್ರಾರಂಭದ ವರ್ಷಗಳಲ್ಲಿ, ಸುತ್ತಮುತ್ತಲಿನ ಕ್ಷೇತ್ರಗಳಲ್ಲಿ ಸುವಾರ್ತೆಯು ಹರಡುವದಕ್ಕೆ ಯೆರೂಸಲೇಮ ಕೇಂದ್ರವಾಗಿತ್ತು. ಯೆರೂಸಲೇಮಿನಿಂದ ರೋಮನ್ ಲೋಕದ ವಾಣಿಜ್ಯ ಮತ್ತು ಆಡಳಿತ ಕೇಂದ್ರಗಳಿಗೆ ವಿಸ್ತರಿಸುವ ಐತಿಹಾಸಿಕ ಪ್ರಕ್ರಿಯೆ, ಉದಾಹರಣೆಗೆ ಕೊರಿಂಥದಿಂದ ಎಫೆಸೆಗೆ ತನ್ನದೇ ಆದ ಆಸಕ್ತಿಯನ್ನು ಹೊಂದಿತ್ತು. ಹಾಗೂ, ಇತಿಹಾಸದಲ್ಲಿ ಕಳೆದುಹೋಗುತ್ತಿರುವ ಆಸಕ್ತಿಯಲ್ಲೂ ಸಹ ಜನರು ಹೊಸ ಒಡಂಬಡಿಕೆಯನ್ನು ಓದಲು ಪ್ರೇರೆಪಿತರಾಗುತ್ತಿದ್ದರು. ಮೊದಲನೆಯ ಶತಮಾನದಲ್ಲಿ ಕ್ರಿಸ್ತನ ಬೋಧನೆಯ ಪ್ರಭಾವದೊಂದಿಗೆ, ಸಮಯದ ಕುರಿತಾಗಿ ಏನಾದರೂ ತಿಳಿದಿರುವವರಿಗೆ, ಇದರ ಸಂದೇಶವು ಹೀಗೆ ಪ್ರಾರಂಭವಾಗುತ್ತದೆ. ಪೌಲನ ಕೊರಿಂಥದವರಿಗೆ ಬರೆದ ಮೊದಲನೆಯ ಪತ್ರ - ಇನ್ನಿತರ ಎಲ್ಲಾ ಸತ್ಯವೇದದ ದಾಖಲೆಗಳಂತೆ - ಲೋಕದ ನಿಯೋಗದ ಸನ್ನಿವೇಶಕ್ಕೆ ಸರಿಹೊಂದುತ್ತದೆ. ಯೆರೂಸಲೇಮಿನಿಂದ ಹರಡುತ್ತಿರುವ ಸುವಾರ್ತೆಯನ್ನು ವೀಕ್ಷಿಸುತ್ತಿರುವ ಹಾಗೆ, ಕೆರೆಯಲ್ಲಿ ಎಸೆದ ಕಲ್ಲಿನಿಂದಾಗಿ ನೀರು ಏಕ ಕೇಂದ್ರವುಳ್ಳ ಚಕ್ರಕಾರಗದಂತೆ ಹೊರಗೆ ಚಲಿಸುತ್ತವೆಯೋ ಹಾಗೆ.

ಯೂದಾಯದಲ್ಲಿ ವಾಸಿಸುತ್ತಿರುವ ಕ್ರೈಸ್ತರ ಆರಂಭದ ವೃತ್ತವು ಪಾಲಿಸ್ತಾನ ದೇಶದ ಯೆಹೂದ್ಯರನ್ನು ಒಳಗೊಂಡಿತ್ತು. ಹೆಚ್ಚಿನ ಸಂಖ್ಯೆಯಲ್ಲಿದ್ದ ಆದಿ ಯೆಹೂದ್ಯ ಕ್ರೈಸ್ತರು ಸ್ವಲ್ಪಮಟ್ಟಿಗೆ ಸಂಪತ್ತು ಅಥವಾ ರಾಜಕೀಯ ಬಲವನ್ನು ಹೊಂದಿದ್ದರು. ಅಧಿಕೃತ, ಕ್ರೈಸ್ತ ಬೋಧಕನ ಕಾರ್ಯವ್ಯಾಪ್ತಿಗೆ ಸಂಬಧಿಸಿದ ಯೆಹೂದ್ಯ ಧರ್ಮ ಧಾರ್ಮಿಕ ನಾಯಕತ್ವವನ್ನು ಒಳಗೊಂಡು, ಕ್ರೈಸ್ತರ ನಂಬಿಕೆ ಮತ್ತು ಹೊಸ ವಿಚಾರಗಳು ಎರಡನ್ನು ವಿರೋಧಿಸುತಿತ್ತು.

ಮಿತಿಯಲ್ಲಿರುವ ಸಂಪನ್ಮೂಲಗಳ ಸ್ಥಳೀಯ ಯೆಹೂದ್ಯರ ನಂತರ, ಬಾಲ ಸಭೆಯ ಅಗಲವಾಗುತ್ತಿರುವ ಚಕ್ರದ ಎರಡನೆಯ ಅಲೆ ಯೆಹೂದ್ಯ ಸಮುದಾಯದಿಂದ ಬಂದವರು ಯೆರೂಸಲೇಮಿಗೆ ಹೊಸಬರು ಮತ್ತು ಯೆಹೂದ್ಯರು ಮತ್ತು ಬದಲಾವಣೆಯನ್ನು ತೀವ್ರವಾಗಿ ಗ್ರಹಿಸಬಲ್ಲಂತವರು. ಅಪೊಸ್ತಲರ ಕೃತ್ಯಗಳು ಇವರನ್ನು ಗ್ರೀಕರು (ಅ.ಕೃ. 6:1) ಎಂದು ಕರೆಯುತ್ತದೆ. ಗ್ರೀಕ್ ಭಾಷೆ ಅವರ ದೇಶೀಯ ಭಾಷೆಯಾಗಿತ್ತು, ಬಹಳ ದಿವಸಗಳಿಂದ ಯೆರೂಸಲೇಮಿನಲ್ಲಿ ವಾಸಿಸುತ್ತಿರುವ ಇಬ್ರಿಯ ಅಥವಾ ಅರೆಮಿಕ್ ಭಾಷೆಯನ್ನು ಮಾತನಾಡುವವರಲ್ಲ.

ಅವರೆಲ್ಲರಲ್ಲಿ ಅನೇಕರು ಗ್ರೀಕರು ಇರಬಹುದು. ಅವರು ರೋಮನ್ ಲೋಕದ ದೂರದ ಮೂಲೆಗಳಲ್ಲಿ ವಾಸಿಸುತ್ತಿದ್ದರು. ಅವರಲ್ಲಿ ಕೆಲವರಾದರೂ ಗುಲಾಮರಾಗಿದ್ದರು. ಯೂದಾಯದಿಂದ ದೂರ, ಅವರು ಸ್ವಾತಂತ್ರ್ಯವನ್ನು ಹೊಂದಿಕೊಂಡಿದ್ದರು. ಆದರೆ ಸ್ವತಂತ್ರರಾಗಿ ಅವರ ಸ್ಥಾನ ಅಪಾಯಕ್ಕೀಡಾಗಿತ್ತು. ಕೆಲವೊಮ್ಮೆ ಯಜಮಾನರು ತಮ್ಮನ್ನು ತಾವು ಹಣಕಾಸಿನ ಹೊಣೆಗಾರಿಕೆಯಿಂದ ರಕ್ಷಿಸಿಕೊಳ್ಳುವದಕ್ಕಾಗಿ ದಾಸರನ್ನು

ಸ್ವತಂತ್ರಗೊಳಿಸುತ್ತಿದ್ದರು. ಸ್ವತಂತ್ರರಾದ ಯೆಹೂದ್ಯರು ತಮ್ಮನ್ನು ತಾವು ತಮ್ಮದು ಎಂದು ಹೇಳಿಕೊಳ್ಳುವ ಯಾವುದೇ ಆಧಾರ ಅಥವಾ ಕುಟುಂಬವಿಲ್ಲದೆ ಇರುತ್ತಿದ್ದರು. ಯೂದಾಯದಲ್ಲಿ ವಾಸಿಸುತ್ತಿರುವ ಯೆಹೂದ್ಯರು ಸ್ಥಳಾಂತರ ಹೊಂದಿದ ತಮ್ಮ ದೇಶಿಯ ಜನರಿಗೆ ಅನುಕಂಪವುಳ್ಳವರಾಗಿದ್ದರು. ಅವರು ದೂರದ ಸ್ಥಳದಲ್ಲಿ ವಾಸಿಸುತ್ತಿರುವ ತಮ್ಮ ಸಂಬಂಧಿಕರ ಕುರಿತು "ಚದುರಿ ಹೋದವರು ಎಂದು ಮಾತನಾಡಿಕೊಳ್ಳುತ್ತಿದ್ದರು."[1] ಸಾಮಾನ್ಯವಾಗಿ ಧಾರ್ಮಿಕ ಪರಂಪರೆ, ಕಾನಾನ ದೇಶದಲ್ಲಿ ವಾಸಿಸುತ್ತಿರುವ ಯೆಹೂದ್ಯರನ್ನು, ತಮ್ಮ ಸಂಬಂಧಿಕರನ್ನು ಮನೆಗೆ ಮರಳಲು ಕರೆಯುವತ್ತ ನಡೆಸುತಿತ್ತು. ಆಧುನಿಕ ಕಾಲದ ಯೆಹೂದ್ಯರು ಮಾಡಿದಂತೆ, ರೋಮನ್ ಲೋಕದಲ್ಲಿ ವಾಸಿಸುತ್ತಿದ್ದವರು ಹಣಕಾಸಿನ ಸಹಾಯವನ್ನು ಮತ್ತು ಚದುರಿ ಹೋದವರನ್ನು ಕಾನಾನ ದೇಶದಲ್ಲಿ ಮರಳಿ ನೆಲೆಗೊಳ್ಳಲು ಸಹಾಯ ಮಾಡುತ್ತಿದ್ದರು. ಚದುರಿ ಹೋದ ಅನೇಕ ಯೆಹೂದ್ಯರು ಸ್ವೀಕರಿಸಲ್ಪಡುವ ಮತ್ತು ಸಂಬಂಧಪಟ್ಟವರಾಗಿರುವ ನಿರೀಕ್ಷೆಯಿಂದ ಯೂದಾಯದೆಡೆಗೆ ತಮ್ಮ ಮಾರ್ಗವನ್ನು ಕಂಡುಕೊಂಡರು. ಆದರೆ ಅವರಿಗೆ ಮರಳಿ ನೆಲೆಗೊಳ್ಳುವದಕ್ಕಿಂತ ಹೆಚ್ಚಾಗಿ ನಮ್ಮ ಮನೆಯಲ್ಲಿದ್ದೇವೆ ಎಂಬ ಭಾವನೆ ಅವಶ್ಯವಾಗಿತ್ತು. ಭಾಷೆ ಮತ್ತು ಸಂಪ್ರದಾಯ ಅವರನ್ನು ದೇಶಿಯ ಜನಸಂಖ್ಯೆಯಿಂದ ಪ್ರತ್ಯೇಕಿಸುತಿತ್ತು. ಗ್ರೀಕ್ ಭಾಷೆಯನ್ನು ಮಾತನಾಡುವ ಯೆಹೂದ್ಯರು ತಮ್ಮಲ್ಲಿ ಇತರರೊಂದಿಗೆ ಸರಿಯಾಗಿ ಹೊಂದಾಣಿಕೆಯಾಗಿಲ್ಲ ಎಂಬುದನ್ನು ಕಂಡುಕೊಂಡಿದ್ದರು - ಇಸ್ರಾಯೇಲಿನಲ್ಲಿ ಸಹ, ಒಬ್ಬನೇ ದೇವರೆಂಬ ನಂಬಿಕೆಯನ್ನು ಹಂಚಿಕೊಂಡವರೊಂದಿಗೆ ಸಹ. ಗ್ರೀಕ್ ಭಾಷೆಯನ್ನಾಡುವವರು ತಮ್ಮನ್ನು ತಾವು ಪ್ರತ್ಯೇಕಿಸಿಕೊಂಡಿದ್ದರು. ಅವರು ತಮ್ಮ ಸ್ವಂತ ದೇವಾಲಯವನ್ನು ಕಟ್ಟಿಕೊಂಡಿದ್ದರು ಮತ್ತು ತಮ್ಮ ಸ್ವಂತ ನೆರೆಹೊರೆಯಲ್ಲಿ ವಾಸಿಸುತ್ತಿದ್ದರು.

ಕ್ರಿಸ್ತನ ಸಂದೇಶವು ಯೂದಾಯ ಸಮುದಾಯಗಳಲ್ಲಿ ಪ್ರಸರಿಸಲು ಪ್ರಾರಂಭಿಸಿದಾಗ ಗ್ರೀಕ್ ಭಾಷೆಯನ್ನು ಮಾತನಾಡುವ ಅನೇಕರು ಯೇಸುವೇ ಕ್ರಿಸ್ತನು, ಸತ್ತವರೊಳಗಿಂದ ಎದ್ದು ಬಂದಿದ್ದಾನೆ ಮತ್ತು ದೇವರ ಬಲಗಡೆಯಲ್ಲಿ ಕೂತುಕೊಂಡಿದ್ದಾನೆ ಎಂಬುದಕ್ಕೆ ಸಾಕ್ಷಿಯಾಗಿದ್ದರು. ಅವರು ಕ್ರೈಸ್ತರಾಗುವದರಿಂದ ತಮ್ಮ ಸಂಪ್ರದಾಯದಲ್ಲಿ ಭದ್ರವಾಗಿ ನೆಲೆಗೊಂಡಿರುವ ದೇಶಿಯರಿಗಿಂತ ಬಹಳ ನಷ್ಟವೇನು ಇರಲಿಲ್ಲ. ಪಂಚಾಶತ್ತಮ ದಿನದ ಮೊದಲನೆಯ ಪ್ರಸಂಗದ ಕೆಲವು ವರ್ಷಗಳ ನಂತರ ಗ್ರೀಕ್ ಭಾಷೆಯನ್ನು ಮಾತನಾಡುವವರು ಸಭೆಯಲ್ಲಿ ತಮ್ಮ ಭಾಗವನ್ನು ಮಾಡಿಕೊಂಡರು. ಅವರು ಯೂದಾಯದಲ್ಲಿ ಎರಡನೆಯ ವರ್ಗದ ನಾಗರೀಕರಾಗಿರುವದಕ್ಕೆ ಹೊಂದಾಣಿಕೆ ಮಾಡಿಕೊಂಡರು; ಆದರೆ ಅವರು ಕ್ರೈಸ್ತರ ಮಧ್ಯದಲ್ಲಿ ಸಮಾನ ಉಪಚಾರವನ್ನು ಅಪೇಕ್ಷಿಸುತ್ತಿದ್ದರು. ಗ್ರೀಕ್ ಭಾಷೆಯನ್ನು ಮಾತನಾಡುವವರು ತಮ್ಮ ವಿಧವೆಗಳನ್ನು ಅಲಕ್ಷಿಸಿದಾಗ ದೂರಿದ್ದರಲ್ಲಿ ಆಶ್ಚರ್ಯವೇನಿಲ್ಲ. ಸಭೆ ಆಲಿಸಿತು. ಪರಿಣಾಮವಾಗಿ ಅಲಕ್ಷಿಸಿದ್ದನ್ನು ಸರಿಪಡಿಸಲು ಏಳು ಜನರನ್ನು ನಿಯೋಜಿಸಲಾಯಿತು (ಅ.ಕೃ. 6:5) ಸ್ತೇಫನ, ಫಿಲಿಪ್ಪ ಅ.ಕೃ. 6:8-7:60 ಮತ್ತು 8:4-40ರಲ್ಲಿ ನೋಡಿದಂತೆ ನಾಯಕರಾಗಿದ್ದರು. ರಾಜಕೀಯ ಮತ್ತು ಧಾರ್ಮಿಕ ನಾಯಕರಾಗಿ ನೆಲೆಗೊಂಡಿರುವ ಯೆಹೂದ್ಯರಿಗೆ ಸ್ತೇಫನನು ಝಳಪಿಸುವ ಬೆತ್ತವಾಗಿದ್ದನು. ಯೇಸುವಿಗಾಗಿ ದಾಹವುಳ್ಳ ತನ್ನ ಜೀವಿತದಿಂದಾಗಿ ಆತನು ಬೆಲೆಯನ್ನು ತೆತ್ತನು. ಸ್ತೇಫನನ ಮರಣ ದೊಡ್ಡ ಪ್ರಮಾಣದಲ್ಲಿ ಹಿಂಸೆಯತ್ತ ನಡೆಸಿದಾಗ

ಫಿಲಿಪ್ಪನು ಯೆರೂಸಲೇಮಿನಿಂದ ಚದುರಿಹೋದ ನಿರಾಶ್ರಿತರಲ್ಲಿದ್ದವನು, ಅವನು ಉತ್ತರದೆಡೆಗೆ ಪ್ರಯಾಣ ಮಾಡಿ ಸಮಾರ್ಯದಲ್ಲಿ ಸುವಾರ್ತಾಸೇವಕನಾದನು. ವಿಶಾಲವಾಗುತ್ತಿರುವ ಕ್ರೈಸ್ತರ ಸಂಖ್ಯೆಯಲ್ಲಿ ಎಳೆಯಬಹುದಾದ ಮುಂದಿನ ಚಕ್ರ ಸಮಾರ್ಯರನ್ನು ಸುತ್ತುವರೆದಿತ್ತು (ಅ.ಕೃ. 8:5-25).

ಗ್ರೀಕರು (ಚದುರಿಹೋದವರ) ನಂತರ. ಸಮಾರ್ಯದವರು ಸುವಾರ್ತೆಯನ್ನು ಸ್ವೀಕರಿಸಿದರು, ಪ್ರವಾಹದ ಬಾಗಿಲು ಅನ್ಯರಿಗೆ ತೆರೆಯಲ್ಪಟ್ಟಿತು. ಕೊರ್ನೇಲ್ಯನ ರೂಪಾಂತರ ಒಂದು ಮೈಲಿಗಲ್ಲಾಗಿತ್ತು (ಅ.ಕೃ. 10); ಆದರೆ ಕೋರ್ನೇಲ್ಯನ ಸ್ವಂತ ಪಟ್ಟಣವಾದ ಕೈಸರೈ ಕ್ರೈಸ್ತತ್ವದ ಕೇಂದ್ರ ಪಟ್ಟಣವಾಗಿರಲಿಲ್ಲ, ಇತರ ಕ್ರೈಸ್ತರು ಉತ್ತರ ಮತ್ತು ಪಶ್ಚಿಮಕ್ಕೆ ತೂರ ಮತ್ತು ಸೀದೋನ, ಫೋಯನಿಕೆಯರ ಪಟ್ಟಣಗಳಿಗೆ ಹರಡಿಕೊಂಡಿತ್ತು ಮತ್ತು ಪ್ರಾಮುಖ್ಯವಾದ ದ್ವೀಪ ಕುಪ್ರದ್ವೀಪಕ್ಕೆ. ಸ್ವಲ್ಪ ಸಮಯದಲ್ಲಿ ಸುವಾರ್ತೆಯ ಬೀಜಗಳು ರೋಮನ್ ಲೋಕದಲ್ಲಿ ಹೆಚ್ಚು ಜನಸಂಖ್ಯೆಯಿರುವ ಕೇಂದ್ರ ಅಂತಿಯೋಕ್ಯದಲ್ಲಿ ಬಿತ್ತಲ್ಪಟ್ಟವು. ಲೂಕನು "ಶಿಷ್ಯರು ಮೊದಲಬಾರಿಗೆ ಅಂತಿಯೋಕ್ಯದಲ್ಲಿ ಕ್ರೈಸ್ತರು ಎಂದು ಕರೆಯಲ್ಪಟ್ಟರು" (ಅ.ಕೃ. 11:26) ಎಂಬುದನ್ನು ದಾಖಲಿಸುತ್ತಾನೆ. ಅಂತಿಯೋಕ್ಯದಲ್ಲಿರುವ ಸಭೆ ಹೆಚ್ಚಿನ ಸಂಖ್ಯೆಯಲ್ಲಿ ಅನ್ಯಜನರು ಸಭಿಕರಿರುವ ಸಭೆಯಾಗಿ ಪ್ರಾರಂಭವಾಯಿತು. ಅಂತಿಯೋಕ್ಯದಿಂದ ಸುವಾರ್ತೆಯು ಅನೀರಿಕ್ಷಿತವಾದ ಕ್ಷೇತ್ರಗಳಿಗೆ ಹರಡಿತು. ಪೌಲನ ಸೌವಾರ್ತಿಕ ಪ್ರಯಾಣ ಈ ಪಟ್ಟಣದಿಂದಲೇ ಪ್ರಾರಂಭವಾಯಿತು.

ಅನೇಕಾವರ್ತಿ ವೇಗದ ಬದಲಾವಣೆ ಮತ್ತು ಬೆಳವಣಿಗೆ ವಿವಾದಗಳಿಗೆ ಎಡೆ ಮಾಡಿತು. ಸಭೆಯನ್ನು ಅಲ್ಲೋಕಲ್ಲೋಲ ಮಾಡಿದ ಮೊದಲನೆಯ ವಾದವಿವಾದ ಕ್ರೈಸ್ತರಾಗಿರುವದು ಇನ್ನೊಂದು ವಿಧದಲ್ಲಿ ಯೆಹೂದ್ಯರಾಗಿರುವದೋ ಅಥವಾ ಅಲ್ಲವೋ ಎಂಬ ವಿಷಯದ ಕುರಿತಾಗಿ. ಹೆಚ್ಚು ಸಂಪ್ರದಾಯಿಕ ಯೆಹೂದಿ ಕ್ರೈಸ್ತರು, ಕ್ರೈಸ್ತ ಧರ್ಮಕ್ಕೆ ರೂಪಾಂತರ ಹೊಂದಿದ ಅನ್ಯಜನರನ್ನು ಬಿಟ್ಟು ತಮ್ಮ ತಂದೆಗಳಿಂದ ಹೊಂದಿಕೊಂಡ ಸಂಪ್ರದಾಯಗಳಲ್ಲಿ ನೆಲೆಯಾಗಿರಬೇಕಾಗಿತ್ತು. ಪೌಲನಿಗೆ ಈ ಯಾವ ಬೋಧನೆಗಳು ಇರಲಿಲ್ಲ. ಅಪೊಸ್ತಲನು ಗಲಾತ್ಯದವರಿಗೆ ಬರೆದ ತನ್ನ ಪತ್ರದಲ್ಲಿ ತನ್ನ ನಿಲುವನ್ನು ಸ್ಪಷ್ಟಪಡಿಸಿದ್ದಾನೆ. ಬಾರ್ನಬನೊಂದಿಗೆ ಆತನು ಅಂತಿಯೋಕ್ಯದಿಂದ ಯೆರೂಸಲೇಮಿಗೆ ಮುಕ್ತ ವಿಚಾರಣೆಗಾಗಿ ಪ್ರಯಾಣ ಬೆಳೆಸಿದರು (ಅ.ಕೃ. 15:1, 2). ಅನ್ಯ ಜನರ ಅಪೊಸ್ತಲರು ಯೆರೂಸಲೇಮಿನ ಸಭೆಯ ನಾಯಕರೊಂದಿಗೆ ತಮ್ಮನ್ನು ತಾವು ವಿವಾದದಲ್ಲಿ ಸಿಲುಕಿಸುವದಕ್ಕೆ ಮನಸ್ಸು ಮಾಡಲಿಲ್ಲ, ಆದರೆ ಅವನು ಯೆಹೂದ್ಯೇತರೊಂದಿಗೆ ಸುವಾರ್ತೆಯನ್ನು ಹಂಚಿಕೊಳ್ಳಲು ಎಲ್ಲರೂ ಒಪ್ಪಂದಕ್ಕೆ ಬರುವವರೆಗೆ ಕಾಯಲಿಲ್ಲ.

ಶೀಲನೊಂದಿಗೆ ಯೆರೂಸಲೇಮಿನ ಸಭೆಯ ನಂತರ ಬೇಗನೆ ತಿಮೋಥೆಯನೊಂದಿಗೆ ಸೇರಿಕೊಂಡನು (ಅ.ಕೃ. 16:1), ಪೌಲನು ಪವಿತ್ರಾತ್ಮನಿಂದ ನಿರ್ದೇಶಿಸಲ್ಪಟ್ಟವನಾಗಿ ಗ್ರೀಕ್-ರೋಮನ್ ಲೋಕದ ಕೇಂದ್ರಕ್ಕೆ ಹೋಗಲು ಸಿದ್ಧನಾದನು, ಅವನು ಅಧುನಿಕ ಟರ್ಕಿ ಎಂದು ಕರೆಯಲ್ಪಡುವ ದೇಶವನ್ನು ದಾಟಿ, ಪಶ್ಚಿಮದೆಡೆಗೆ ಎಷ್ಟು ಸಾಧ್ಯವೋ ಅಷ್ಟು ದೂರ ಏಶಿಯಾ ಮೈನರ ಒಳಗೆ ಕಾಲ್ನಡಿಗೆಯಿಂದ ಪ್ರಯಾಣ ಮಾಡಿದನು ಮತ್ತು ನಂತರ ಯುರೋಪಗೆ ಹೋಗುವ ಸಾಹಸವನ್ನು ಮಾಡಿದನು (ಅ.ಕೃ. 16:10, 11).

ಅಷ್ಟರಲ್ಲಿ, ಪೌಲನು ಮತ್ತು ಅವನ ಸಂಗಡಿಗರು ಗ್ರೀಸ್ ದೇಶದುದ್ದಕ್ಕು ತಮ್ಮ ಶಿಷ್ಯರ

ಸಮೂಹವನ್ನು ಹಿಂದಕ್ಕೆ ಬಿಟ್ಟು ಬಂದರು - ಫಿಲಿಪ್ಪಿ, ಥೆಸಲೋನಿಕ, ಬೆರೂಯ, ಅಥೇನ್ಯ ಮತ್ತು ಕೊರಿಂಥ. ಅಪೊಸ್ತಲರು ರಕ್ಷಣೆಯ, ದೇವರೊಂದಿಗೆ ಸಮಾಧಾನ ಮತ್ತು ಬರಲಿಕ್ಕಿರುವ ಲೋಕದಲ್ಲಿ ಜೀವಿತದ ಸಂದೇಶವನ್ನು ಮೂರ್ತಿ ಪೂಜಕರಿಂದ ಹೊಸದಾಗಿ ರೂಪಾಂತರ ಹೊಂದಿದವರ ಹಸ್ತದಲ್ಲಿ ಒಪ್ಪಿಸಿದರು. ದೇವರು ನಜರೇತಿನ ಯೇಸುವಿನಲ್ಲಿ ಮಾನವ ರೂಪವನ್ನು ಧರಿಸಿ ಪ್ರತ್ಯಕ್ಷನಾದನು. ಯೆಹೂದ್ಯ ನಾಯಕರ ಒಳಸಂಚಿನಿಂದಾಗಿ ರೋಮನ್‌ರಿಂದ ಕ್ರೂಜೆಗೆ ಹಾಕಿಸಲ್ಪಟ್ಟ ನಂತರ, ಯೇಸು ಮಾನವ ಕುಲಕ್ಕಾಗಿ ದೇವರ ವಿಮೋಚನೆಯ ಯೋಜನೆಗೆ ಅನುಸಾರವಾಗಿ ದೇವರಿಂದ ಸತ್ತವರೊಳಗಿಂದ ಎಬ್ಬಿಸಲ್ಪಟ್ಟನು. ರಕ್ಷಣೆಯು ಬೇರೆ ಯಾರಿಂದಲೂ ಅಲ್ಲ (ಅ.ಕೃ. 4:12). ಸಭೆಯು ರಕ್ಷಣೆಯನ್ನು ಹೊಂದಿದವರ ದೇಹವಾಗಿದೆ. ಕ್ರೈಸ್ತರು ಎಂದರೆ ಯೇಸು ಮಾದರಿಯಾಗಿ ತೋರಿಸಿದ ಜೀವನ ಶೈಲಿಯನ್ನು ಅಪ್ಪಿಕೊಳ್ಳುವವರು. ವ್ಯಕ್ತಿಗಳಿಗೆ ರಕ್ಷಣೆಯನ್ನು ತರುವದಕ್ಕಿಂತ ಹೆಚ್ಚಾಗಿ, ಯೇಸು ಜನರ ಮೇಲೆ ಆಳ್ವಿಕೆ ಮಾಡುವದಾಗಿದೆ - ಆತನ ಸಭೆ, ರಕ್ಷಣೆ ಹೊಂದಿದವರದ್ದಾಗಿದೆ.

## ಕೊರಿಂಥದಲ್ಲಿ ಸುವಾರ್ತೆಯನ್ನು ಪರಿಚಯಿಸಿದ್ದು

ಸುವಾರ್ತೆಯು ಗ್ರೀಕ್-ರೋಮನ್ ಲೋಕದುದ್ದಕ್ಕೂ ಕೊರಿಂಥ ಮತ್ತು ಎಫೆಸೆ ಕೇಂದ್ರಗಳ ಮೂಲಕ ಪ್ರಕಾಶಿಸತೊಡಗಿತು. ಕ್ರಿ.ಪೂ. ಐದನೇ ಶತಮಾನದಲ್ಲಿ ಹೆರೋಡಾಟಸ್ "ಕೊರಿಂಥ ಯಂತ್ರಶಾಸ್ತ್ರವನ್ನು" ಸ್ವಲ್ಪ ಮಟ್ಟಿಗೆ ಉಪೇಕ್ಷಿಸಿದ ಸ್ಥಳವಾಗಿತ್ತು ಎಂದು ಬರೆಯುತ್ತಾನೆ.[2] ಆದಾಗ್ಯೂ ಪಟ್ಟಣವು ರಫ್ತು ಮಾಡುವ ಬಲವಾದ ಕಾರಖಾನೆಗಳನ್ನು ಹೊಂದಿತ್ತು. ಹೆರೋಡೋಟಸ್‌ನ ನಂತರ ಐದನೂರು ವರ್ಷಗಳ ಮೇಲೆ ನವೀಕರಿಸಲ್ಪಟ್ಟ ಕೊರಿಂಥ ಪಟ್ಟಣವು ರೋಮನ್‌ರಿಗೆ ದೊಡ್ಡ ವಾಣಿಜ್ಯ ಮತ್ತು ಆಡಳಿತದ ಕೇಂದ್ರವಾಗಿತ್ತು. ಕೊರಿಂಥ ಮತ್ತು ಎಫೆಸೆ ಏಗಿಯನ್ ಸಮುದ್ರದ ವಿಸ್ತರಣೆಯಿಂದಾಗಿ ಒಂದು ದ್ವೀಪದ ಮೂಲಕ ಪ್ರತ್ಯೇಕಿಸಲ್ಪಟ್ಟಿದ್ದವು ಸಂಚಾರ ಮತ್ತು ವ್ಯಾಪಾರ ಮೇಲಿಂದ ಮೇಲೆ ನಡೆಯುತ್ತಿದ್ದವು. ಕೆಲವು ದಿವಸಗಳ ಒಂದು ಪ್ರಯಾಣ ದ್ವೀಪಗಳಲ್ಲಿ ಒಂದು ರಾತ್ರಿ ತಂಗಲು ಅವಕಾಶವಾಯಿತು, ಎರಡನೂರು ಮೈಲುಗಳಷ್ಟು ಪ್ರಯಾಣ ಮಾಡಬಹುದಾಗಿತ್ತು ಅಥವಾ ಕೆಂಕ್ರೆಯ ದಲ್ಲಿರುವ ಒಂದು ಬಂದರದಿಂದ ಎಫೆಸೆಯಲ್ಲಿರುವ ಬಂದರನ್ನು ಪ್ರತ್ಯೇಕಿಸುತ್ತಿರುವ ಸ್ಥಳದ ವರೆಗೆ. ಕೆಂಕ್ರೆಯ ದಿಂದ ಕೊರಿಂಥ ಪಟ್ಟಣದ ಮಧ್ಯಭಾಗಕ್ಕೆ ನಾಲ್ಕು ಮೈಲು ದೂರವಿತ್ತು. 1 ಕೊರಿಂಥ ದಿಂದ ಸ್ಪಷ್ಟವಾಗುವ ಹಾಗೆ, ಎರಡೂ ವಾಣಿಜ್ಯ ಪಟ್ಟಣಗಳು ನಿಕಟವಾದ ಸಂಬಂಧವನ್ನು ಹೊಂದಿದ್ದವು.

ಕೊರಿಂಥಕ್ಕೆ ಪೌಲನ ಮೊದಲನೆಯ ಬೇಟಿ ಕ್ರಿ.ಶ. 49ರಲ್ಲಿ ಇರಬಹುದು. ಪೇತ್ರನು ಪಂಚಾಶತ್ತಮ ದಿನದಂದು ಪ್ರಸಂಗಿಸಿ ಇಪ್ಪತ್ತು ವರ್ಷಗಳು ಗತಿಸಿದ್ದವು (ಅ.ಕೃ. 2). ಕ್ರೈಸ್ತತ್ವವು ಈಗಾಗಲೇ ಜಾಗತಿಕ ಧರ್ಮವಾಗುವ ಮಾರ್ಗದಲ್ಲಿತ್ತು. ಐತಿಹಾಸಿಕ ದಾಖಲೆಗಳ ಪರಸ್ಪರ ಸಂಬಂಧಗಳ ಮೂಲಕ, ಕೊರಿಂಥದಲ್ಲಿ ಪೌಲನ ಸಮಯದ ದಿನಾಂಕನ್ನು ನಿಖರವಾಗಿ ಹೇಳಬಹುದು. ಅಪೊಸ್ತಲರು ಕೊರಿಂಥವನ್ನು ಬಿಟ್ಟ ಸ್ವಲ್ಪ ಸಮಯದ ನಂತರ ಆತನನ್ನು ರೋಮನ್ನರು ಗ್ರೀಸನ ದಕ್ಷಿಣ ಭಾಗದಿಂದ ರೂಪಿಸಿದ ಆಖಾಯದ ದೇಶಾಧಿಪತಿಯ ಮುಂದೆ ಕೊಂಡೊಯ್ದರು. ಗಲ್ಲಿಯೋನನು, ದೇಶಾಧಿಪತಿಯ

ಗೌರವವನ್ನು ಹೊಂದಿದ್ದ ರಾಯಭಾರಿಯಾಗಿದ್ದನು.

ರೋಮನ್ ದೇಶದ ರಾಯಬಾರಿಯಾಗಿದ್ದ ಈತನು ಶಕ್ತಿಶಾಲಿಯಾಗಿದ್ದನು, ಸಾಮಾನ್ಯವಾಗಿ ರೋಮದೇಶದ ಪ್ರಾಮುಖ್ಯವಾದ ಕುಟುಂಬದಿಂದ ಬಂದವನಾಗಿದ್ದನು. ಅವನು "ಪರದೇಶದಲ್ಲಿ ರಾಯಭಾರಿಯಾಗಿ" ಕಾರ್ಯ ನಿರ್ವಹಿಸುತ್ತಿದ್ದನು. ರೋಮನ್ ಪ್ರಜಾಪ್ರಭುತ್ವದ ಅವಧಿಯಲ್ಲಿ ರಾಯಭಾರಿಯು ಪಟ್ಟಣದ ಮುಖ್ಯ ಆಡಳಿತ ಅಧಿಕಾರಿಯಾಗಿರುತ್ತಿದ್ದನು. ರೋಮ್ ಮತ್ತು ಅದರ ದೇಶಗಳು ಸಾಮ್ರಾಟನ ಅಧಿಕಾರಕ್ಕೆ ಒಳಪಟ್ಟ ನಂತರ, ಅದು ಆಗಷ್ಟೀನನ ಮುಂದಕ್ಕೆ,[3] ಸಾಮ್ರಾಟನು ಕ್ರಮವಾಗಿ ರೋಮನ್ನರ ಸಂಪ್ರದಾಯಗಳಿಗೆ ಅಂಟಿಕೊಂಡಿರುವ ಕಲ್ಪನಾ ಕಥೆಗಳನ್ನು ನಿರ್ವಹಿಸುವದಕ್ಕಾಗಿ ರಾಯಭಾರಿಗಳನ್ನು ತನಗಾಗಿ ಆಯ್ಕೆ ಮಾಡಿಕೊಳ್ಳುತಿದ್ದನು. ಅಖಾಯದಲ್ಲಿದ್ದ ಅಥವಾ ಸಾಮ್ರಾಜ್ಯದಲ್ಲಿ ಎಲ್ಲಿಯಾದರೂ ಇರುವ ರಾಯಭಾರಿಯನ್ನು ಸಾಮಾನ್ಯವಾಗಿ ರೋಮದೇಶದಲ್ಲಿರುವ ಸಿನೆಟ್ಟನಿಂದ ಒಂದು ವರ್ಷದ ಅವಧಿಗಾಗಿ ಅಯ್ದುಕೊಳ್ಳಲಾಗುತಿತ್ತು. ಆ ಸಮಯದಲ್ಲಿ ಅವನು ಆಡಳಿತಾಂಗ, ನ್ಯಾಯಾಂಗದ ಮತ್ತು ಶಾಸನಾಂಗದ ಅಧಿಕಾರಗಳನ್ನು ನಿರ್ವಹಿಸುತ್ತಿದ್ದನು. ರಾಯಭಾರಿಯು ಮಾತನಾಡುವಾಗ, ಅದು ರೋಮದೇಶದ ಧ್ವನಿಯಾಗಿರುತಿತ್ತು.

ಗಲ್ಲಿಯೋನ ಮತ್ತು ಸೆರ್ಗ್ಯ ಪೌಲರು (ಅ.ಕೃ. 13:7; 18:12) ಹೊಸ ಒಡಂಬಡಿಕೆಯಲ್ಲಿ ಹೆಸರಿಡಿದು ಉಲ್ಲೇಖಿಸಲಾದ ಇಬ್ಬರು ದೇಶಾಧಿಪತಿಗಳಾಗಿದ್ದಾರೆ. ಉಚ್ಚಾರಣೆಯಲ್ಲಿ ಸ್ವಲ್ಪ ಬದಲಾವಣೆಯನ್ನು ತಂದು ಹೆಸರನ್ನು "ಪೌಲೂಸ್" ಶಾಸನ ಮತ್ತು ಸಾಹಿತ್ಯದ ದಾಖಲೆಗಳಲ್ಲಿ ಬರೆಯಲಾಗಿದೆ. ದಕ್ಷಿಣ ಏಶಿಯಾ ಮೈನರ್‌ನ ಹಲವು ಶಾಸನಗಳಿಂದ ಈ ಹೆಸರು ಬಂದದ್ದಾಗಿರುತ್ತದೆ. ಸೆರ್ಗ್ಯಪೌಲನು ಶಕ್ತಿಶಾಲಿಯಾದ ರೋಮನ್ನನಾಗಿದ್ದನು. ತನ್ನ ಲೋಕದಲ್ಲಿ ವಿಶೇಷವಾದ ಗೌರವವನ್ನು ಹೊಂದಿದವನಾಗಿದ್ದನು; ಆದರೆ ಪ್ರಾಚೀನ ಲೋಕದ ದಾಖಲೆಗಳು ಹೆಚ್ಚು ನಿರ್ಧಿಷ್ಟವಾದ ಮಾಹಿತಿಯನ್ನು ಗಲ್ಲಿಯೋನ್ ಮತ್ತು ಸೆರ್ಗ್ಯ ಪೌಲನ ಕುರಿತು ಒದಗಿಸುತ್ತವೆ.[4] ಅಖಾಯದ ದೇಶಾಧಿಪತಿಯು ಸಿನಿಕಾ (*Stoic philosopher*) ಎಂಬವನ ಸಹೋದರನಾಗಿದ್ದನು, ನ್ಯೂರೋ ಚಕ್ರವರ್ತಿಯು ಆಳ್ವಿಕೆಯಲ್ಲಿದ್ದ ಅವಧಿಯಲ್ಲಿ ಸ್ವಲ್ಪ ಸಮಯದವರೆಗೆ ಸಾಮಾಜ್ಯವನ್ನು ವಾಸ್ತವಿಕವಾಗಿ ಆಳ್ವಿಕೆ ಮಾಡಿದ ವಿರಕ್ತ ತತ್ವಜ್ಞಾನಿಯಾಗಿದ್ದನು (ಕ್ರಿ.ಶ. 54-68). ಸಿನಿಕಾನ (*Among*) ಬರಹಗಳಲ್ಲಿ ಗಲ್ಲಿಯೋನನ ಕುರಿತಾದ ಉಲ್ಲೇಖಗಳಿವೆ. ಕ್ರಿ.ಶ. 65ರಲ್ಲಿ ತತ್ವಜ್ಞಾನಿಯು ನ್ಯೂರೋ ಚಕ್ರವರ್ತಿಯ ಮೆಚ್ಚಿಗೆಯಿಂದ ಬಿದ್ದು ಹೋದನೋ, ಅವನು ಮತ್ತು ಅವನ ಸಹೋದರನಾದ ಗಲ್ಲಿಯೋನನು ಆತ್ಮಹತ್ಯೆ ಮಾಡಿಕೊಳ್ಳಲೇಬೇಕಾದ ಪರಿಸ್ಥಿತಿ ಬಂತು.

ಮೊದಲನೆಯ ಶತಮಾನದಲ್ಲಿ ಡೆಲ್ಪಿ ಗ್ರೀಕರ ಲೋಕದಲ್ಲಿ ಗೌರವಿಸಲ್ಪಟ್ಟ ಪ್ರಾಚೀನ ಸ್ಥಳವಾಗಿತ್ತು ಆ ಗ್ರೀಕ್ ಲೋಕದಲ್ಲಿ ಪ್ರಾಮುಖ್ಯವಾದ ಆಡಳಿತಾತ್ಮಕ ಬೆಟ್ಟಿಗಳನ್ನು ದಾಖಲಿಸುವದು ರೋಮನ್‌ರಲ್ಲಿ ಒಂದು ಸಾಮಾನ್ಯವಾದ ಅಭ್ಯಾಸವಾಗಿತ್ತು. ಡೆಲ್ಪಿಯು ಕೊರಿಂಥದ ಕೊಲ್ಲಿಯಲ್ಲಿ ಸ್ಥಾಪಿತವಾಗಿತ್ತು, ಕೊರಿಂಥದ ಪಶ್ಚಿಮದಿಂದ ಸುಮಾರು ಎಪ್ಪತ್ತು ಮೈಲಿಗಳಷ್ಟು ದೂರದಲ್ಲಿತ್ತು. 1900ರ ಪ್ರಾರಂಭದಲ್ಲಿ ಡೆಲ್ಪಿಯಲ್ಲಿರುವ ಪ್ರಾಚೀನ ವಸ್ತುಶಾಸ್ತ್ರಜ್ಞರು, ಗಲ್ಲಿಯೋನನು ಚಕ್ರವರ್ತಿಯಾದ ಕ್ಲೌದಿಯನ (ಕ್ರಿ.ಶ. 41-54) ಆಳ್ವಿಕೆಯ ಅವಧಿಯಲ್ಲಿ ಅಖಾಯದ ರಾಯಭಾರಿಯಾಗಿದ್ದ ಸಮಯವನ್ನು ಸೂಚಿಸುವ ದಿನಾಂಕಗಳನ್ನು

ಶಿಲಾಶಾಸನಗಳ ತುಣುಕುಗಳ ಮೇಲೆ ಕಂಡುಕೊಂಡಿದ್ದರು. ಕೊರಿಂಥವು ಅಖಾಯಾ ಪ್ರಾಂತದ ರೋಮನ್‌ರ ಆಡಳಿತದ ಕೇಂದ್ರ ಸ್ಥಳವಾಗಿದ್ದದರಿಂದ, ಇತಿಹಾಸ ತಜ್ಞರು ಗಲ್ಲಿಯೋನನು ಕೊರಿಂಥದಲ್ಲಿ ದೇಶಾಧಿಪತಿಯಾಗಿದ್ದ ಸಮಯದ ಕುರಿತು ಭರವಸೆಯುಳ್ಳವರಾಗಿದ್ದರು. ಗಲ್ಲಿಯೋನನು ತನ್ನ ಒಂದು ವರ್ಷದ ಅವಧಿಗೆ ಕ್ರಿ.ಶ. 51 ರ ವಂಸತ ಋತುವಿನ ಕಾಲದಲ್ಲಿ ರಾಯಭಾರಿಯಾಗಿ ನೇಮಕಗೊಂಡಿದ್ದನು. ಪೌಲನು ಅಲ್ಲಿಂದ ಹೋಗುವದಕ್ಕೆ (ಅ.ಕೃ. 18:18) ಒಂದು ಅಥವಾ ಎರಡು ತಿಂಗಳು ಮುಂಚಿತವಾಗಿ ಗಲ್ಲಿಯೋನನು ಕೊರಿಂಥಕ್ಕೆ ಬಂದಿದ್ದನೂ ಎಂಬ ಕಲ್ಪನೆಯ ಮೇಲೆ, ಇತಿಹಾಸ ತಜ್ಞರು ಅಪೊಸ್ತಲನು ಪಟ್ಟಣದಲ್ಲಿ ಇದ್ದನು ಎಂಬುದನ್ನು ಖಚಿತವಾಗಿ ತಿಳಿದುಕೊಂಡಿದ್ದರು.

ಕೊರಿಂಥಕ್ಕೆ ಹೋಗುವ ಪೂರ್ವದಲ್ಲಿ ಅಥನೇಯ ಪಟ್ಟಣದಲ್ಲಿ ಹಲವು ತಿಂಗಳು ತಾನೇ ಕ್ರಿಸ್ತನ ಸಂದೇಶವನ್ನು ನೀಡಿದ್ದನು. ಗ್ರೀಕೋ-ರೋಮನ್‌ನ ಗೌರವಯುತ ಸ್ಥಾನದಲ್ಲಿ ಯಶಸ್ಸು ಅತ್ಯಲ್ಪವಾಗಿ ಕಂಡುಬರುತಿತ್ತು (ಅ.ಕೃ. 17:34). ಸೀಲ ಮತ್ತು ತಿಮೋಥೆಯರು ಇನ್ನೂ ಮೆಕೆದೋನ್ಯದಲ್ಲಿದ್ದರು. ಅವರು ಅವನನ್ನು ಸೇರಿಕೊಳ್ಳಲು ಕೂತೂಹಲದಿಂದ ಕಾಯುತ್ತಿದ್ದರು, ಆದರೆ ಪ್ರಯೋಜನವಾಗಲಿಲ್ಲ. ಪೌಲನು ಜೊತೆಗಾರರಿಲ್ಲದೆ ಕೊರಿಂಥ ಪಟ್ಟಣವನ್ನು ಪ್ರವೇಶಿಸಿದಾಗ, ಅವನು ಬಲಹೀನನೂ, ಭಯಪಡುವವನೂ ಬಹು ನಡುಗುವವನು ಆಗಿದ್ದನು (1 ಕೊರಿಂಥ 2:3). ಬಹಳ ಮಟ್ಟಿಗೆ ಅವನು ಒಬ್ಬನೇ ಪ್ರಯಾಣಮಾಡಿರಬಹುದು. ಭೂಮಿಯ ಮೇಲೆ ಜೊತೆಗಾರರಿಲ್ಲದೇ ಸಂಚರಿಸುವ ಯಾವನಾದರೂ ತನ್ನನ್ನು ತಾನು ಅಪಾಯದಲ್ಲಿ ಸಿಲುಕಿಸುವವನಾಗಿದ್ದಾನೆ.

ಅಥನೇಯದಿಂದ ಕೊರಿಂಥದ ವರೆಗಿನ ಅವನ ಪ್ರಯಾಣ ಎರಡು ಆಯ್ಕೆಗಳನ್ನು ನೀಡಿತು. ಭೂಮಾರ್ಗದಿಂದ ಪ್ರಯಾಣ ಸುಮಾರು ಐದು ದಿನಗಳನ್ನು ತೆಗೆದುಕೊಳ್ಳುತ್ತದೆ. ಕೆಲವು ಮಾರ್ಗಗಳು ಕಠಿಣ ಪ್ರದೇಶದಲ್ಲಿ ಹಾದು ಹೋಗವ ಮಾರ್ಗವಾಗಿರುತ್ತವೆ. ಸಮುದ್ರಯಾನ ಬಹಳ ವೆಚ್ಚದಾಯಕವಾಗಿರುತ್ತದೆ, ಆದರೆ ಒಂದು ದಿನದಲ್ಲಿ ಹೋಗಬಹುದು. ಅಪೊಸ್ತಲರು ಕಾಲ್ನಡಿಗೆಯ ಪ್ರಯಾಣಕ್ಕೆ ಹೊಂದಿಕೊಂಡಿದ್ದರು. ಭೂಮಾರ್ಗದ ಪ್ರಯಾಣ ಅವರನ್ನು ಹಾಗೆ, ಅವನು ತನ್ನ ಎಡಕ್ಕೆ ಸಾಲಾಮಿಸ್ ದ್ವೀಪಗಳನ್ನು ಕಾಣಬಹುದಾಗಿತ್ತು. ಪೌಲನಿಗಿಂತ ಸುಮಾರು ಐದನೂರು ವರ್ಷಗಳ ಹಿಂದೆ ಅಥನೇಯದಿಂದ ಪಶ್ಚಿಮಕ್ಕೆ ಹಿಂದಿನ ಎಲುಸಿಸ್ಸ, ಇಟಲಿ ಜಗತ್ತಿನಲ್ಲೇ ಜನಪ್ರಿಯವಾದ ದೇಮೇತ್ರಿ, ಬೆಳೆಗಳ ದೇವತೆ ಮತ್ತು ಇನ್ನೊಬ್ಬ ದೇವತೆಗಳ ತಾಯಿ ಇನ್ನೊಂದು ವಿಧದಲ್ಲಿ "ಕೋರ್" ಅಥವಾ "ಪೆರಸಿಫೊನ"[5] ಎಂದು ಕರೆಯಲ್ಪಡುತ್ತಿದ್ದ ದೇವತೆಗೆ ಪ್ರತಿಷ್ಟಿಸಿದ ದೇವಾಲಯವಿರುವ ಪಟ್ಟಣವಾಗಿತ್ತು. ಚಕ್ರವತಿಗಳು ಮತ್ತು ಅರಸರುಗಳು ಎಲುಸಿನಿಯನ ರಹಸ್ಯಗಳಲ್ಲಿ ತೊಡಗಿಸಿಕೊಳ್ಳಲು ಅಲ್ಲಿಗೆ ಹೋಗುತಿದ್ದರು. ಅಪೊಸ್ತಲನು ಮುಂದುವರೆದ ಅಥೇನೇಯದವರು ಗ್ರೀಕ್ ಪಟ್ಟಣಗಳ ಸಂಯೋಜನೆಯೊಂದಿಗೆ ಅಹಷ್ವೇರೋಷನ ಪರ್ಶಿಯನ್ನರ ನೌಕಾ ಸೈನದೊಂದಿಗೆ ಯುದ್ಧವನ್ನು ನಡೆಸಿದವು. ಈ ಯುದ್ಧವು ಸಾಲೇಮಿಸ್ಸನ್ನು ಉತ್ತರದಲ್ಲಿರುವ ಮುಖ್ಯಪ್ರದೇಶದಿಂದ ಪ್ರತ್ಯೇಕಿಸುವ ಇಕ್ಕಟ್ಟಾದ ಜಲಸಂಧಿಯಲ್ಲಿ ನಡೆಯಿತು. ಅಧಿಕ ಸಂಖ್ಯೆಯಲ್ಲಿದ್ದಾಗಲೂ, ಗ್ರೀಕ್‌ರು ಜಯವನ್ನುಗಳಿಸಿದರು ಮತ್ತು ತಮ್ಮ ಮಾತೃಭೂಮಿಯನ್ನು ಸ್ವತಂತ್ರಗೊಳಿಸಿದರು. ಅವರು ತಮ್ಮ ಇತಿಹಾಸದ ಈ ಭಾಗವನ್ನು ಎಂದಿಗೂ ಮರೆಯುವದಿಲ್ಲ.

ಅವನ ಮಾರ್ಗವು ದಕ್ಷಿಣದ ಪಥದೆಡೆಗೆ ತೆಗೆದುಕೊಳ್ಳಲು ಪ್ರಾರಂಭಿಸಿದಹಾಗೆ ಅವನ ಬಲಬದಿಗೆ ಅಪೊಸ್ತಲನು ಅಕ್ರೋಪೊಲಿಸ ಎಂದು ಹೆಸರಾಗಿರುವ ಮೆಗಾರಾ ಪಟ್ಟಣವನ್ನು ನೋಡಿರಬಹುದು. ಅವನು ಕೊರಿಂಥ ಪಟ್ಟಣದ ಇಸಥಮಸ್ ಪರ್ವತಗಳನ್ನು ಹಾದು ಹೋಗುತ್ತಿರುವ ಹಾಗೆ ಭೂಭಾಗವು ತೀವ್ರವಾಗಿ ಮೇಲೆರತೊಡಗಿತು. ಅವನು ಕೊರಿಂಥದ ಪೂರ್ವಕ್ಕಿರುವ, ಬಂದರು ಕೆಂಕ್ರೆಯ ತಲುಪುವದಕ್ಕಿಂತ ಮುಂಚಿತವಾಗಿ, ಖಂಡಿತವಾಗಿ ಲೋಕದಲ್ಲಿರುವ ಉದ್ಗಾರವನ್ನು ಎತ್ತುವ ದೃಶ್ಯಗಳನ್ನು ನೋಡಿ ಆಶ್ಚರ್ಯಪಟ್ಟಿರಬಹುದು. ಅಲ್ಲಿಂದ ಅವನ ಪ್ರಯಾಣವು ಅವನನ್ನು ಸಮುದ್ರ ದೇವತೇ ಪೊಸೈಡೋನ್ ದೇವತೆಗೆ ಪ್ರತಿಷ್ಠಿಸಿದ ಇಸಥಾಮೈನ್ ಗೇಮ್ಸ್ ಇರುವ ಸ್ಥಳಕ್ಕೆ ಕೊಂಡೊಯ್ಯದಿರಬಹುದು. ಅವರು ಓಲಂಪಲಿಯನ್ ಆಟಗಳ ಪ್ರಾಚೀನತೆಯ ಕೊರತೆಯಲ್ಲಿದ್ದವು, ಓಲಂಪಿಯಾ ಪೆಲೋಪೊನ್ನಸಸ್ಸ್‌ನ ಪಶ್ಚಿಮಕ್ಕೆ ಸ್ಥಾಪಿತವಾಗಿತ್ತು; ಇಸ್ತತಮಿಯಾ, ಇದಕ್ಕೆ ವಿರೋಧವಾಗಿ ಗ್ರೀಕ್ ಭಾಷೆಯನ್ನು ಮಾತನಾಡುವವರ ಲೋಕದಲ್ಲಿತ್ತು. ಜನರು ವರ್ಷದಲ್ಲಿ ಎರಡು ಸಾರಿ ನಡೆಯುವ ಆಟಗಳ ಸ್ಥಳಕ್ಕೆ ಸಮೂಹವಾಗಿ ಬರುತ್ತಿದ್ದರು. ಪ್ರಾಚೀನ ಸಂಚಾರಿಗಳು ಇಸ್‌ತಮೀಯಾದಲ್ಲಿರುವ ಪೊಸೈಡೋನ್ ದೇವಾಲಯದ ಮಹಾವೈಭವವನ್ನು ಒಲಂಪಿಯಾದಲ್ಲಿರುವ ಜೆಸ್ಸು ವಾಸಸ್ಥಾನಕ್ಕೆ ಹೋಲಿಸುತ್ತಿದ್ದರು. ಪಾಲಿಮೋನನ್ ಗುಡಿ, ಪೊಸೈಡೋನ್ ದೇವಾಲಯದ ಸಮೀಪದಲ್ಲಿ ಧರ್ಮಶ್ರದ್ದೆಯುಳ್ಳ ಒಬ್ಬ ಯುವಕನು ನಿಂತಿದ್ದನು. ಅಪೊಸ್ತಲನು ತನ್ನ ಪ್ರತಿಯೊಂದು ಚಲನೆಯಲ್ಲಿ ಸಾಕ್ಷಿಯಾಗಿರುವ ವಿಗ್ರಹಾರಧನೆಯನ್ನು ನೋಡಿ ತತ್ತರಿಸಿದನು. ದೇಶದ ಪ್ರತಿಯೊಂದು ಭಾಗದಲ್ಲಿ ದೇವರುಗಳು ನೇಯಲ್ಪಟ್ಟಿದ್ದವು.

## ಪೌಲನ ತಿಳಿದಿರುವ ಪಟ್ಟಣ

ಇಸ್ತಮಿಯಾದಿಂದ ಕೊರಿಂಥದಲ್ಲಿರುವ ಪೆಸಡೋನ ದೇವಾಲಯದ ವರೆಗೆ ಪೌಲನು ನಡೆಯುತ್ತಿರುವಾಗ ಬಿಸಿಲು ಬಲವಾಗಿತ್ತು. ಬೇಸಿಗೆಯ ತಿಂಗಳಲ್ಲಿ ಆಕಾಶವು ಶುಭ್ರವಾಗಿತ್ತು; ಸೂರ್ಯನ ಬಿಸಿಲು ಚರ್ಮವನ್ನು ಸುಡುತ್ತಿರುವ ಅನುಭವ. ಇಸತಮಸ್ ಮೇಲಿರುವ ಪಟ್ಟಣ ಗ್ರೀಕ್‌ರು ಇತಿಹಾಸವನ್ನು ನಿರ್ಮಿಸುವವರೆಗೆ ಎಗೀಯನ್ ಸಮುದ್ರವನ್ನು ಎಡ್ರಿಯಾಟಿಕ್ ಸಮುದ್ರದಿಂದ ಪ್ರತ್ಯೇಕಿಸುತಿತ್ತು. “ಕೊರಿಂಥ” ಎಂಬ ಪದವೇ ಗ್ರೀಕ್‌ಭಾಷೆಯ ಮಾತನಾಡುತ್ತಿದ್ದ ಹಿಂದಿನ ಸಮಯವನ್ನು ಸಾಕ್ಷೀಕರಿಸುತಿತ್ತು. ವ್ಯಾಪಾರದ ಮಾರ್ಗಗಳು ಇಸ್ತಮಿಯಾ ಮತ್ತು ಅದರ ಮೇಲೆ ಪ್ರಭುತ್ವವನ್ನು ಸಾಧಿಸಿದ ಪಟ್ಟಣದ ವರೆಗೆ ಹರಡಿತ್ತು. ಭೌಗೋಳಿಕವಾಗಿ ಕೊರಿಂಥ ಪಟ್ಟಣಕ್ಕೆ ಅಧಿಕಾರ ಮತ್ತು ಜನಪ್ರಿಯತೆ ದೊರಕಿದ್ದವು. ಭೂಸಂಚಾರವು ಪೂರ್ವದಿಂದ ಪಶ್ಚಿಮಕ್ಕೆ ಅದರ ಕ್ಷೇತ್ರಗಳ ಮೂಲಕ ಹರಡಿತ್ತು; ಸಮುದ್ರ ಸಂಚಾರ ಅದರ ಬಂದರಗಳ ಮೂಲಕ ಪೂರ್ವದಿಂದ ಪಶ್ಚಿಮಕ್ಕೆ ಹರಡಿತ್ತು. ಅದೇ ಸಮಯದಲ್ಲಿ ಕೆಂಕ್ರೆಯ ಪೂರ್ವಕ್ಕಿರುವ ಬಂದರಾಗಿತ್ತು. ಲಿಚಾಯುಮ್ ಪಶ್ಚಿಮದಲ್ಲಿರುವ ಒಂದು ಬಂದರಾಗಿತ್ತು. ಇಸ್ತಾಮಸ್‌ನ ಕಿರಿದಾದಭಾಗ, ಕೊರಿಂಥದ ಉತ್ತರಕ್ಕೆ ಮತ್ತು ಅದರ ಮೇಲ್ವಿಚಾರಣೆಯಲ್ಲಿ ಡಯೋಲ್ಕಸ್ ಎಂದು ಕರೆಯಲ್ಪಡುವ ಹಳ್ಳಿಗಳ ಭೂಮಾರ್ಗವಿತ್ತು, ಅದರ ಮೇಲೆ, ಹಡಗು ಮತ್ತು ಸಣ್ಣ ಹಡಗುಗಳನ್ನು ಭೂಮಾರ್ಗದಿಂದ ನಾಲ್ಕು ಮೈಲುಗಳ ವರೆಗೆ ಸಾಗಿಸಲಾಗುತಿತ್ತು.

ಕ್ರಿ.ಪೂ. 1000ರಲ್ಲಿ ಡೋರಿಕ್‌ನ ದಾಳಿಯ ಪೂರ್ವದಲ್ಲಿ ಕೊರಿಂಥ ಪಟ್ಟಣವಿತ್ತು. ದಾವೀದ ಮತ್ತು ಸಲಮೋನರ ಸಮಕಾಲೀನರು. ಗ್ರೀಕ್ ದೇವಾಲಯದಲ್ಲಿ ಉಪಯೋಗಿಸಿದ ಮೂರು ವಾಸ್ತುಶಿಲ್ಪಗಳ ಕ್ರಮದಲ್ಲಿ ಡೋರಿಕ್ ಮತ್ತು ಕೊರಿಂಥದ ಶೈಲಿ ಈ ಪಟ್ಟಣದಲ್ಲಿಯೇ ಉತ್ಪತ್ತಿಯಾಗಿದ್ದವು. ಗ್ರೀಕ್ ಪ್ರಭುತ್ವದ ಶ್ರೇಷ್ಠ ಅವಧಿ ಕೊರಿಂಥದಲ್ಲಿಯೇ ಪ್ರಾರಂಭವಾಯಿತು. ಕೊರಿಂಥದ ಕುಂಬಾರಿಕೆ ವ್ಯಾಪಾರಿಗಳು ಮೆಡಿಟೇರಿಯನ್ ಲೋಕದುದ್ದಕ್ಕು ಸರಕುಗಳ ವ್ಯಾಪಾರವನ್ನು ನಡೆಸಿದರು. ಪೌಲನು ಅಥನೇಯ ಪಟ್ಟಣಕ್ಕೆ ಆಗಮಿಸುವದಕ್ಕಿಂತ ಐದನೂರು ವರ್ಷಗಳ ಮುಂಚೆ, ಪ್ರಜಾಪ್ರಭುತ್ವದೊಂದಿಗೆ, ಮತ್ತು ಕೊರಿಂಥವು ನಿರಂಕುಶ ಪ್ರಭುತ್ವದ ಅಥವಾ ಕೆಲವೇ ಜನರ ಅಧಿಕಾರದಲ್ಲಿತ್ತು ಅವರು ಕಡು ವೈರಿಗಳಾಗಿದ್ದರು. ಕ್ರಿ.ಪೂ. ಐದನೆಯ ಶತಮಾನದಲ್ಲಿ, ಗ್ರೀಕರು ಯುದ್ಧ ಪ್ರಯತ್ನದಲ್ಲಿ ಕಡಿಮೆಯಾಗಿ ತೋರಿ ಬಂದರು, ಮುಖ್ಯ ಅಂಶ ಕೊರಿಂಥವಾಗಿತ್ತು. ಫಿಲಿಪೊನೇಶಿಯಾ ಯುದ್ದವು ಕೊರಿಂಥ ಮತ್ತು ಅದರ ವಸಾಹತುಗಳಲ್ಲಿ ಒಂದರ ಜೊತೆಯ ಗಲಭೆಯಿಂದಾಗಿ ಪ್ರಾರಂಭವಾಯಿತು. ಅಥನೇಯ ಮತ್ತು ಸ್ಪಾರಟಾ ತಮ್ಮ ಸಂಯೋಜನೆಯನ್ನು ಒಟ್ಟುಗೂಡಿಸಿಕೊಂಡವು, ಕೊರಿಂಥವು ಸ್ಪಾರಟಾದ ಪ್ರಾಮುಖ್ಯವಾದ ಮಿತ್ರರಾಷ್ಟ್ರವಾಯಿತು.

ಗ್ರೀಕ್ ಸಂಸ್ಕಂತಿಗೆ ಕೊರಿಂಥವು ನೀಡಿರುವ ಕೊಡುಗೆ ವೈಭವಯುತವಾಗಿದ್ದವು ಪೌಲನ ಭೇಟ್ಟಿಯಿಂದ ಮುಂದಿನ ಮುನ್ನೂರು ವರ್ಷಗಳ ವರೆಗೆ ಪಟ್ಟಣವು ಕಳಂಕತರುವ ಹೆಸರನ್ನು ಗಳಿಸಿತು. ಪ್ರಾಚೀನಕಾಲದವರು "ಶ್ರೀಮಂತ ಕೊರಿಂಥ" ದ ಕುರಿತು ಬರೆದರು. ಪಟ್ಟಣವು ಶತಮಾನಗಳವರೆಗೆ ಕಲ್ಪನಾ ಕಥೆಯಂಥ ಅಭಿವೃದ್ಧಿಯನ್ನು ಅನುಭವಿಸಿತು; ಆದರೆ ಪೌಲನು ಆಗಮಿಸಿದಾಗ, ಮಾರ್ಗಗಳು, ಅಂಗಡಿಗಳು ಮತ್ತು ಗುಡಿಗಳು ಹೊಳಪನ್ನು ನೀಡುವ ಹೊಸ ನೋಟವನ್ನು ಹೊಂದಿದವು. ಜಟಿಲ ಪರಿಸ್ಥಿತಿಗಳ ಮೂಲಕ, ರೋಮ ಕ್ರಿ.ಪೂ.ಎರಡನೆಯ ಶತಮಾನದ ಮಧ್ಯದಲ್ಲಿ ಗ್ರೀಕ್‌ನ ಪರ್ಯಾಯ ದ್ವೀಪಕ್ಕೆ ಸೇರಿತು. ಸರಣಿ ಯುದ್ಧಗಳ ನಂತರ, ರೋಮ ಮೆಕೆದೋನ್ಯಕ್ಕೆ ಸೇರಿಕೊಂಡಿತು ಮತ್ತು ಅದನ್ನು ಒಂದು ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು ಆಡಳಿತಮಾಡಿತು. ಇನ್ನೂ ಗ್ರೀಸ್ ರೋಮನ್ನರ ಅತಿಕ್ರಮಣವನ್ನು ತಡೆಗಟ್ಟುತ್ತಿದೆ. ಪರ್ಯಾಯ ದ್ವೀಪದ ದಕ್ಷಿಣಕ್ಕೆ, ಕೊರಿಂಥವು ಸ್ವಾದೀನತೆಯನ್ನು ಒಂದು ಸಂಯೋಜನೆಯನ್ನು ದುರ್ಬಲವಾದ ಹತೋಟಿಯಲ್ಲಿ ನಡೆಸಿತು. ಪಟ್ಟಣವು ಮತ್ತು ಅದರ ಮಿತ್ರರಾಷ್ಟ್ರಗಳು ರೋಮ ಸೈನ್ಯದಳಕ್ಕೆ ಸಮನಾಗಿರಲಿಲ್ಲ. ಕ್ರಿ.ಪೂ. 146ರಲ್ಲಿ, ರೋಮನ್ ಸೇನಾಪತಿ ಮ್ಯುಮೀಸ ಅವರನ್ನು ತುಳಿದುಹಾಕಿದನು. ಕೊರಿಂಥವು ರೋಮಗೆ ಅಡೆತಡೆ ಹಾಕಿದ್ದರಿಂದ, ಸೇನಾಪತಿಯು ಅದನ್ನು ನಾಶ ಮಾಡುವದರ ಮೂಲಕ ಅದನ್ನು ಒಂದು ಉದಾಹಣೆಯನ್ನಾಗಿ ಮಾಡಿದನು. ಜನಪ್ರಿಯ ಇಸ್ತಮೈನ್ ಆಟಗಳ ಅಜಾಗರೂಕತೆಯಿಂದಾಗಿ ಅದನ್ನು ಪಶ್ಚಿಮದಲ್ಲಿರುವ ನೆರೆಯ ಪಟ್ಟಣ ಸಿಕ್ಯೋನ್‌ಕ್ಕೆ ಸ್ಥಳಾಂತರಿಸಲಾಯಿತು. ನಾಲ್ಕನೂರು ವರ್ಷಗಳ ವರೆಗೆ ಕೊರಿಂಥದ ಏಕಮಾತ್ರ ನಿವಾಸಿಗಳು ಅತಿಕ್ರಮಿಸಿದ್ದ. ಹೆಮ್ಮೆಯ ಪಟ್ಟಣ, ಗ್ರೀಕ್ ಲೋಕದ ಆಭರಣವಾಗಿದ್ದ ಪಟ್ಟಣ, ನರಿಗಳಿಗೆ ಮತ್ತು ಕ್ರೂರ ನಾಯಿಗಳಿಗೆ ವಾಸಸ್ಥಾನವಾಯಿತು. ರೋಮನ್‌ರಿಂದ ಬೂದಿಗೆ ಸಮಾನವಾಯಿತು.

ಕೊರಿಂಥದ ಪುನರುಜ್ಜೀವನ ಜುಲಿಯಸ್ ಸೀಜರ್‌ನಿಂದ ಪ್ರಾರಂಭವಾಯಿತು

ಖಂಡಿತವಾಗಿಯೂ ಆ ಸಮಯದಲ್ಲಿದ್ದ ಒಬ್ಬ ಗೌರವಯುತ ಮನುಷ್ಯನಾಗಿದ್ದನು. ಸೀಜರ್‌ನು ಇಸ್ತಮಸ್‌ನ ಯುದ್ಧ ಕೌಶಲ್ಯದ ಪ್ರಾಮುಖ್ಯತೆಯನ್ನು ಗುರುತಿಸಿದನು. ಕ್ರಿ.ಪೂ. 44ರಲ್ಲಿ ಅವನ ಮರಣದ ಸ್ವಲ್ಪ ಸಮಯದ ಪೂರ್ವದಲ್ಲಿ ಭೂಮಿಯಿಲ್ಲದೇ ನೆಲೆಸಿದವರನ್ನು ಮತ್ತು ರೋಮ್‌ದಿಂದ ಸ್ವತಂತ್ರರಾದವರನ್ನು ಉತ್ತರ ಆಫ್ರಿಕಾದಲ್ಲಿ ಕಾರ್ಥೇಜ ಮತ್ತು ಕೊರಿಂಥದಲ್ಲಿನ ಅವಶೇಷಗಳ ಮೇಲೆ ರೋಮನ್ ವಸಾಹತುಗಳನ್ನು ಸ್ಥಾಪಿಸಲು ವ್ಯವಸ್ಥೆ ಮಾಡಿದನು. ಲ್ಯಾಟಿನ ಭಾಷೆಯನ್ನು ಮಾತನಾಡುವ ಇಸ್ತಮಸ್ಸನ ಮಾದರಿ ಪಟ್ಟಣ ಮರುಸ್ಥಾಪನೆಯಾಯಿತು. ಅದರ ಸಂಸ್ಥೆಗಳು, ಸರಕಾರದ ರಚನೆ, ತೆರಿಗೆ ಮತ್ತು ಧರ್ಮಗಳು ರೋಮನ ಮಾದರಿಯನ್ನು ಆಧರಿಸಿದ್ದವು. ಮೊದಲನೆಯ ಶತಮಾನದಿಂದ ವಾಸ್ತುಶಿಲ್ಪಗಳು ಪ್ರಾಚೀನ ವಸ್ತುಶಾಸ್ತ್ರಜ್ಞರಿಂದ ಬಯಲಿಗಿಡಲ್ಪಟ್ಟವುಗಳು ಲ್ಯಾಟೀನಿನ್ನಲ್ಲಿ ಅದ್ಭುತವಾಗಿದ್ದವು.[6] ಪೌಲನು ಪಟ್ಟಣದಲ್ಲಿ ಕಾಲಿಟ್ಟ ನಂತರ, ಅವನು ಬೀದಿಯಲ್ಲಿ ಮಾರುವವರು ಮತ್ತು ಸ್ಥಾನಿಕ ನಿವಾಸಿಗಳು ಲ್ಯಾಟೀನ ಭಾಷೆಯನ್ನು ಮಾತನಾಡುವದನ್ನು ಕಂಡನು. ಗ್ರೀಕ್ ಲೋಕದ ಪಟ್ಟಣಗಳ ಬೀದಿಯಲ್ಲಿ ರೊಮ್‌ನ ಅಧಿಕೃತ ಭಾಷೆಯನ್ನು ಮಾತನಾಡುವದನ್ನು ನೋಡುವದು ಇದು ಆತನಿಗೆ ಪ್ರಥಮಬಾರಿಯಾಗಿರಲಿಲ್ಲ. ಅದೇ ಸಮಯದಲ್ಲಿ ಹೊಸ ಒಡಂಬಡಿಕೆಯಲ್ಲಿ ವಸಾಹತುಗಳ ಸ್ಥಾನದ ಕುರಿತಾಗಿಯೇ ವಿಶಿಷ್ಟವಾಗಿ ಹಸ್ತಾಕ್ಷರವನ್ನು ನೀಡಿದ ಏಕೈಕ ಪಟ್ಟಣ ಫಿಲಿಪ್ಪಿ ಪಟ್ಟಣವಾಗಿರುವಾಗ (ಅ.ಕೃ. 16:12), ಇನ್ನೂ ಇತರರಿದ್ದರು. ಲುಸ್ತ್ರದಂತೆ ಪಿಸಿದ್ಯದ ಹತ್ತಿರವಿರುವ ಅಂತಿಯೋಕ್ಯ ಒಂದು ವಸಾಹತುವಾಗಿತ್ತು, ಇಂಥಹ ಪಟ್ಟಣಗಳಲ್ಲಿ ಲ್ಯಾಟೀನ ಭಾಷೆಯನ್ನು ಮಾತನಾಡುವವರು ಸಾಮಾನ್ಯವಾಗಿದ್ದರು.

ಪೌಲನು ಪ್ರವೇಶಿಸಿದ ಕೊರಿಂಥವು ಒಟ್ಟಾರೆ ಹೊಸ ಪಟ್ಟಣವಾಗಿತ್ತು ಆದರೆ ರೋಮನ್ ಅಖಾಯ ಕ್ಷೇತ್ರದಲ್ಲಿ ಈಗಾಗಲೇ ಜನಪ್ರಿಯತೆಯನ್ನು ಹೊಂದಿತ್ತು. ಅಥನೇಯ, ಈಶಾನ್ಯಕ್ಕೆ ಇರುವ ನೆರೆಹೊರೆಯ ಮತ್ತು ವೈರಿರಾಷ್ಟ್ರ, ಕಲಿಯುವಿಕೆಯ ಕೇಂದ್ರವಾಗಿ ಜನಪ್ರಿಯತೆಯಲ್ಲಿ ಮುಂದುವರೆದಿತ್ತು. ಪಟ್ಟಣದ ಇತಿಹಾಸವು ವೈಭವಯುತವಾಗಿತ್ತು; ಆದರೆ ರಾಜಕೀಯವಾಗಿ ಮತ್ತು ಆರ್ಥಿಕವಾಗಿ, ಅಥನೇಯವು ಕೊರಿಂಥಕ್ಕೆ ಯಾವುದೇ ರೀತಿಯಲ್ಲಿ ಹೋಲಿಕೆಯಾಗಿರಲಿಲ್ಲ.

ಕೊರಿಂಥದಲ್ಲಿ ವಾಸಿಸುತ್ತಿದ್ದ ಜನರ ಸಂಖ್ಯೆ ಅಥವಾ ಇತರ ಗ್ರೀಕೋ - ರೋಮನ್ ಪಟ್ಟಣಗಳಲ್ಲಿ ವಾಸಿಸುತ್ತಿದ್ದವರು, ಈ ವಿಷಯದಲ್ಲಿ ಕುಪ್ರಸಿದ್ಧರಾಗಿರುವದನ್ನು ಎಣಿಕೆ ಮಾಡುವದು ಬಹಳ ಕಠಿಣವಾಗಿತ್ತು. ಸಾಂಪ್ರದಾಯಿಕ ಪಂಡಿತರು ವ್ಯತಿರಿಕ್ತವಾದ ವೈವಿಧ್ಯಮಯ ಅಂದಾಜನ್ನು ನೀಡುತ್ತಾರೆ. ಊಹೆಗಳ ಸಂಗ್ರಹ ಹೆಚ್ಚು ಕಡಿಮೆ ನಿಖರವಲ್ಲದ ಮಾಹಿತಿಯ್ನು ಆದರಿಸಿದೆ, ಕೊರಿಂಥ ಮತ್ತು ಅದರ ಸುತ್ತಮುತ್ತಲಿನ ಕ್ಷೇತ್ರದಲ್ಲಿರುವ ("ಕೊರಿಂಥದವರ") ಜನಸಂಖ್ಯೆಯನ್ನು ಸುಮಾರು 100,000 ಮತ್ತು 125,000 ಇವುಗಳ ಮಧ್ಯದಲ್ಲಿ ನೀಡುತ್ತದೆ.[7]

ಕೊರಿಂಥವು ಶ್ರೀಮಂತ ನಾಗರೀಕರು ವ್ಯಾಪಾರಿಗಳನ್ನು, ಭೂಒಡೆಯರನ್ನು ಮತ್ತು ಸರಕಾರಿ ಅಧಿಕಾರಿಗಳನ್ನು ಒಳಗೊಂಡಿತು. ಅಲ್ಲದೇ ಪಟ್ಟಣದಲ್ಲಿ ಕೂಲಿಕೆಲಸದವರು, ಗುಲಾಮರು ಮತ್ತು ಸಂಚಾರಿ ಬೋಧಕರ ಸಮೂಹ ವಾಸಿಸುತಿತ್ತು. ಅವರಲ್ಲಿ ಕೆಲವರು ಪೋಲಿಗಳಾಗಿದ್ದರು.

ಅನೇಕ ವಿಷಯಗಳಲ್ಲಿ, ರೋಮನ್ ಲೋಕದ ಪಟ್ಟಣಗಳಲ್ಲಿ ಗುಲಾಮರಾಗಿ ಇರುವವರಿಗೆ ಹಸಿವೆಯಿಂದ ಮುಕ್ತರಾಗಲಿ ಕೆಲವು ತಾಸುಗಳ ಕೆಲಸಕ್ಕಾಗಿ ಬೇಡಿಕೊಳ್ಳುವಂಥಹ ಸ್ಥಿತಿಯಿತ್ತು. ಕೊರಿಂಥದ ಹೆಚ್ಚಿನ ಸಂಖ್ಯೆಯ ನಿವಾಸಿಗಳು ಗುಲಾಮರಾಗಿದ್ದರು. ಕ್ರೈಸ್ತರಿಗೆ ಅಸಹ್ಯವಾದ ಕಾರ್ಯಗಳನ್ನು ಮಾಡುವ ಅಭ್ಯಾಸವನ್ನು ಗುಲಾಮತನ ಕೊಡುಗೆಯಾಗಿ ನೀಡಿತು. ನ್ಯಾಯಾಲಯದಲ್ಲಿ ಗುಲಾಮರು ಸಾಕ್ಷಿಯನ್ನು ಹೇಳಬೇಕಾದಲ್ಲಿ, ಹಿಂಸೆಯು ಸರ್ವೇಸಾಮಾನ್ಯವಾಗಿತ್ತು. ಗುಲಾಮ ಮಹಿಳೆಯರು, ಪ್ರಭುದ್ಧರಾಗಲಿ ಹದಿಹರಿಯದವರಾಗಲಿ ತಮ್ಮ ಯಜಮಾನರ ಸೊತ್ತಾಗಿದ್ದರು - ತಿಳುವಳಿಕೆಯಿದ್ದಾಗಲೂ. ಮನೆವಾರ್ತೆಯ ಶಿಕ್ಷಿತ ಗುಲಾಮರಿಗೆ ಸಹಿಸಬಹುದಾದ ಜೀವಿತವಿತ್ತು; ಇತರರು ಬೇಗನೇ ಮರಣಕ್ಕೆ ಈಡಾಗಲೂ ಗಣಿಗಳಲ್ಲಿ ಮತ್ತು ಮಿಲ್ಲ್‌ಗಳಲ್ಲಿ ದುರುಪಯೋಗಕ್ಕೆ ಒಳಗಾಗುತ್ತಿದ್ದರು. ಅವರನ್ನು ಸ್ಥಳಾಂತರಿಸುವದು ಒಂದು ವ್ಯಾಪಾರವಿದ್ದಂತೆ. ಪೌಲನು ದುಂದುಗಾರಿಕೆ ಮತ್ತು ಕಡುಬಡತನ ಎರಡರ ಸಾಕ್ಷಿಯನ್ನೂ ನೋಡಿದ್ದಾನೆ.

ಮಿತ್ರ ರಾಷ್ಟ್ರಗಳಲ್ಲಿ ಕ್ರೂರ ನಾಯಿಗಳು ತಿರುಗಾಡುತ್ತಿದ್ದವು. ಉತ್ಪಾದಿಸಿದ ವಸ್ತುಗಳೊಂದಿಗೆ ಚಕ್ಕಡಿಗಳನ್ನು ಹೊಂದಿರುವ ಒಕ್ಕಲಿಗರು ಮಾರುಕಟ್ಟೆಯಲ್ಲಿ ತಮ್ಮ ನೆಚ್ಚಿನ ಅಂಗಡಿಗಳಲ್ಲಿ ಸ್ಪರ್ದೆಮಾಡುತ್ತಿದ್ದರು. ವ್ಯಾಪಾರಿಗಳು ಮಣ್ಣಿನ ಮಡಿಕೆಗಳನ್ನು, ಚಪ್ಪಲಿಗಳನ್ನು ಮತ್ತು ಆಹಾರ ಸಾಮಗ್ರಿಗಳನ್ನು ಮಾರಾಟಕ್ಕೆ ಇಡುತ್ತಿದ್ದರು. ದೊಡ್ಡ ಪಾತ್ರೆಗಳನ್ನು ತಮ್ಮ ತಲೆಯ ಮೇಲೆ ಹೊತ್ತುಕೊಂಡ ಮಹಿಳೆಯರು ಅಲಂಕರಿಸಿದ ಆವರಣದಲ್ಲಿ ಒಳ್ಳಕ್ಕೆ ಬರುವದು ಹೊರಕ್ಕೆ ಹೋಗುವದು ಒಳಕ್ಕೆ ಬರುವದು ಮಾಡುತ್ತಿದ್ದರು. ಹತಾಶೆಯಲ್ಲಿದ್ದ ಬಿಕ್ಷುಕರು, ರೊಟ್ಟಿಯ ತುಣುಕುಗಳನ್ನು ಹುಡುಕುತ್ತಾ ಅಲೆದಾಡುತ್ತಿದ್ದರು. ಹೊಸ ದೃಶ್ಯಗಳು ಮತ್ತು ಧ್ವನಿಗಳು ಪೌಲನ ಮನಃಪಟಲದ ಮೇಲೆ ದಾಳಿ ಇಡುತ್ತಿದ್ದವು. ಆತನು ಈ ಜನಸಮೂಹಕ್ಕೆ ಕ್ರಿಸ್ತನನ್ನು ಪರಿಚಯಿಸಿಲು ಬಂದಿದ್ದನು. ಕೊರಿಂಥವು ಮಾತ್ರ ವ್ಯಾಪಾರಕ್ಕಾಗಿ ಉತ್ತಮವಾಗಿ ಸ್ಥಾಪಿತವಾಗಿರಲಿಲ್ಲ, ಪಟ್ಟಣದ ಸುತ್ತಮುತ್ತಲೂ ಇದ್ದ ಪ್ರದೇಶಗಳು ವೈವಿಧ್ಯಮಯ ಮತ್ತು ಸಮೃದ್ಧಿಯ ವ್ಯವಸಾಯಕ್ಕೆ ದಾರಿಮಾಡಿತ್ತು. ಕ್ಷೇತ್ರದಲ್ಲಿ ಅನೇಕ ಚಿಲುಮೆಗಳಿದ್ದವು. ಆಂಗ್ಲ ಭಾಷೆಯ ಮೇಲೆ ಪಟ್ಟಣದ ವ್ಯವಸಾಯವು ತನ್ನ ಅಚ್ಚನ್ನು ಹಾಕಿತ್ತು. “ಬೀಜವಿಲ್ಲದ ದೀಪದ್ರಾಕ್ಷಿ” ವಾಸ್ತವದಲ್ಲಿ “ಕೊರಿಂಥದ ದಾಕ್ಷಿ” ಗಳಾಗಿದ್ದವು. ಪಟ್ಟಣವು ದೊಡ್ಡ ಪರ್ವತದೆಡೆಗೆ ನಡೆಸುವ ತಗ್ಗಾದ ಇಳುಕಲಿನ ಮೇಲೆ ಕಟ್ಟಲಪಟ್ಟಿತ್ತು. ಅಥನೇಯ ಮತ್ತು ಇತರ ಪಟ್ಟಣಗಳು “ಉನ್ನತವಾದ ಪಟ್ಟಣ” ಗಳನ್ನು ಹೊಂದಿದ್ದವು. ಬಲವಾದ ಕೇಂದ್ರ ಅಲ್ಲಿ ಕಾಪಾಡುವವರು ಜೀವದ ಪರಿವೆಯಿಲ್ಲದೇ ಆಕ್ರಮಣಕಾರಿಗಳನ್ನು ತಡೆಯುವ ಕೊನೆಯ ಪ್ರಯತ್ನವನ್ನು ಮಾಡಬಹುದು. ಕೊರಿಂಥವು ಪುರದ್ವಾರಕ್ಕೆ ಒಂದು ಎಕ್ರೋಕೊರಿಂಥವನ್ನು ಹೊಂದಿತ್ತು, “ಉನ್ನತವಾದ ಕೊರಿಂಥ”; ಆದರೆ ಪಟ್ಟಣದ ಕೇಂದ್ರದಿಂದ ಪರ್ವತದ ನೇರವಾದ ಮತ್ತು ಅದರ ಅಳತೆ ವೈರಿಗಳಿಂದ ಸ್ವಲ್ಪ ಮಟ್ಟಿಗೆ ರಕ್ಷಣೆಯನ್ನು ಒದಗಿಸುತಿತ್ತು. ಪರ್ವತಗಳು ಪಟ್ಟಣಕ್ಕೆ ರಕ್ಷಣೆಗಿಂತ ವ್ಯಾಪಾರದ ಗುರುತಾಗಿತ್ತು.

# ಕೊರಿಂಥದ ಧರ್ಮಗಳು

ಪೌಲನು ಕೊರಿಂಥಕ್ಕೆ ಆಗಮಿಸಿದಾಗ ವಿಗ್ರಹಾರಾಧನೆಯ ಪುರಾತನ ಪಟ್ಟಣಗಳ ಆರಾಧನ ಪದ್ಧತಿಗಳು ಬಹಳ ಮಟ್ಟಿಗೆ ಸತ್ತಂತಿದ್ದವು. ಮಾತ್ಸರ್ಯದ ಹಕ್ಕುಸಾಧನೆಯ ವಿರೋದವಾಗಿ ಮೊದಲನೆಯ ಶತಮಾನದ ಪ್ರಾಚೀನ ವಸ್ತು ಸಂಶೋಧನಾ ಶಾಸ್ತ್ರ ಅಥವಾ ಬರೆದಿಟ್ಟಿರುವ ದಾಖಲೆಗಳು ಮೂರ್ತಿಪೂಜಕರ ದುರ್ಬಲ ಧರ್ಮ ಒಂದು ತಿವಿತದಿಂದ ಸ್ವ-ನಾಶಕ್ಕೆ ನಡೆಸುವಂತದ್ದಾಗಿದೆ ಮತ್ತು ಅದನ್ನು ಕ್ರೈಸ್ತತ್ವದಿಂದ ಸ್ಥಳಾಂತರಿಸಬೇಕು. ದೇವಾಲಯದ ಕಟ್ಟಡಗಳು ಧಾರ್ಮಿಕ ಜೀವಬಲಕ್ಕೆ ಅನುರೂಪವಲ್ಲದ ಸೂಚನೆಗಳಾಗಿವೆ, ಆದರೆ ಕಟ್ಟಡದ ಯೋಜನೆಗೆ ತಗಲಿದ ವೆಚ್ಚ ಕನಿಷ್ಠಪಕ್ಷ ಜನರು ಧಾರ್ಮಿಕ ಸಂಪ್ರದಾಯಗಳನ್ನು ಗೌರವಿಸುತ್ತಿದ್ದರು ಎಂಬುದನ್ನು ಸೂಚಿಸುತ್ತದೆ. ಮೊದಲನೆಯ ಶತಮಾನದ ಗ್ರೀಕ್ ಲೋಕದಲ್ಲಿ, ಕೊರಿಂಥದಲ್ಲಿ ದೇವರ ದೇವಾಲಯಗಳು ಅಭಿವೃದ್ಧಿ ಹೊಂದಿದ್ದವು. ಯಾಜಕರು ತಮ್ಮ ಕರ್ತವ್ಯವನ್ನು ಮಾಡುತ್ತಿದ್ದರು. ಆಟಗಳು ಮತ್ತು ಇತರ ಸಾರ್ವಜನಿಕ ಹಬ್ಬಗಳು ದೇವರುಗಳಿಂದ ಆಶೀರ್ವಾದವನ್ನು ಆಹ್ವಾನಿಸುವದರೊಂದಿಗೆ ಮುಂದುವರೆಯುತ್ತಿದ್ದವು. ಯಜ್ಞಗಳನ್ನು ಅರ್ಪಿಸುತ್ತಿದ್ದರು. ಕೊರಿಂಥದಲ್ಲಿ ರೋಮನ್ ಮತ್ತು ಗ್ರೀಕ್ ದೇವತೆಗಳ ಕಲಬೆರೆಸಿನ ಮೂಲಕ ನಿಖರವಾಗಿ ಅಂದಾಜುಮಾಡುವದು ಕಠಿಣವಾಗಿತ್ತು, ಆದರೆ ಶ್ರೀಮಂತ ಕುಟುಂಬದಲ್ಲಿ ಶಾಲೆಗೆ ಹೋಗುವ ಮಕ್ಕಳು ಗ್ರೀಕ್ ಮತ್ತು ರೋಮನ್ ಎರಡೂ ಧರ್ಮಗಳ ಪುರಾಣ ಸಾಹಿತ್ಯವನ್ನು ಕಲಿಯುತ್ತಿದ್ದರು ಎಂಬುದು ನಿಜವಾಗಿಯೂ ಖಚಿತವಾಗಿತ್ತು.

ಪೌಲನು ಕೊರಿಂಥ ಪಟ್ಟಣದ ಕೇಂದ್ರದಲ್ಲಿ ತಿರುಗಾಡುತ್ತಿರುವಾಗ, ಅವನು ಎತ್ತರ ಪ್ರದೇಶದ ದೃಶ್ಯದ ಮೇಲೆ ಪ್ರಭುತ್ವವನ್ನು ಹೊಂದಿದ ದೇವಾಲಯವನ್ನು ನೋಡಿರಬಹುದು. ಅದರ ಸ್ಥಂಭಗಳು ಪುರಾತನ ವಿಧದವುಗಳಾಗಿದ್ದವು, ಸ್ಥಾನಿಕ ಕಲ್ಲುಗಳಿಂದ ಮಾಡಿದ ಕಲ್ಲಿನ ಸ್ಥಂಭದ ಶೈಲಿಯಲಿಯಲ್ಲಿದ್ದವು. ಕೊರಿಂಥದಲ್ಲಿ ಸಂಗಮರಿ ಕಲ್ಲುಗಳಿರಲಿಲ್ಲ. ದೇವಾಲಯದ ವಾಸ್ತುಶಿಲ್ಪವು ಡೋರಿಕ್ ಮಾದರಿಯನ್ನು ಅನುಸರಿಸಿತ್ತು. ಅದರ ಸ್ಥಂಭಗಳು ಮೇಲಿನ ಕಲ್ಲಿಗೆ ಬೆಂಬಲ ನೀಡುವಂತೆ ಮೋಟಾಗಿ ಮತ್ತು ದಪ್ಪವಾಗಿದ್ದವು. ನೆಲಸಮವಾದ ಪಟ್ಟಣದಲ್ಲಿ ಉಳಿದಿರುವ ರಕ್ಷಿತ ಶವಗಳ, ಪ್ರಾಚೀನ ರಚನೆಯನ್ನು ಹೊಂದಿದ ದೇವಾಲಯ ಪೌಲನ ದಿನಗಳಲ್ಲೂ ಇತ್ತು. ಇಂದು ಗ್ರೀಸ್‌ನಲ್ಲಿ ಇರುವ ಪುರಾತನವಾದ ದೇವಾಲಯವಾಗಿದೆ. ಗ್ರೀಕ್‌ರು ಇದನ್ನು ಅಪೊಲೋ ಗೌರವಾರ್ಥವಾಗಿ ಕಟ್ಟಿದರೆಂಬ ಅಂದಾಜು ಇದೆ, ಆದರೆ ದೇವಾಲಯವನ್ನು ಕಟ್ಟಲು ಪ್ರಚೋದನೆ ನೀಡಿದ ದೇವರು ಯಾರು ಎಂಬುದು ಖಚಿತವಾಗಿಲ್ಲ. ರೋಮನ್ ಮತ್ತು ಗ್ರೀಕ್‌ರು ಅಪೊಲೋ ದೇವರನ್ನು ಆರಾಧಿಸುತ್ತಿದ್ದರಿಂದ, ರೋಮದೇಶದ ನಿವಾಸಿಗಳು ಬಲಿಯನ್ನು ಅರ್ಪಿಸುವದನ್ನು ಮುಂದುವರೆಸಿರಬಹುದು ಮತ್ತು ರೋಮದೇಶದಲ್ಲಿ ನೆಲೆಯಾಗಿದ್ದವರನ್ನು ಕರೆತಂದಾಗ ಕಿನ್ನರಿ ಮತ್ತು ದಿವ್ಯಜ್ಞಾನದ ದೇವರ ಸೇವೆಯನ್ನು ಮಾಡಲು ಯಾಜಕರನ್ನು ನೇಮಿಸಿರಬಹುದು.

ಎಫ್ರೋದೇತ ಎಂಬ ವಿಗ್ರಹ, ಪ್ರೀತಿಯ ದೇವತೆ ಕೊರಿಂಥದಲ್ಲಿ ಧೀರ್ಘಕಾಲ ಉಪಸ್ಥಿತವಾಗಿರುವ ದೇವತೆ. ಉತ್ತರದಲ್ಲಿರುವ ಪ್ರಾಚೀನದೊಂದಿಗೆ ಜೊತೆಗೂಡಿದ, ಈ ದೇವತೆಗಳು ಕುಪ್ರ ದ್ವೀಪದ ಸಮುದ್ರ ದಂಡೆಯ ನೆರೆಗಳಿಂದ ಉತ್ಪನ್ನವಾಗಿರಬಹುದು.

ಸಿಂಥಿರಾ ದ್ವೀಪದ ಮೇಲಿರುವ ಕುಪ್ರದಲ್ಲಿ ಮತ ಶ್ರದ್ಧೆ ಗಮನೀಯವಾಗಿತ್ತು. ಪೆಲೊಪೊನ್ನಸ್ಸ್ ಬಂದರದ ದಕ್ಷಿಣಕ್ಕೆ. ಈ ದೇವತೆಯ ಆರಾಧನೆಯನ್ನು ಗ್ರೀಕ್‌ನ ಮುಖ್ಯಭೂಮಿಯಾದ ಸಿಂಥೆರಿಯಾದಿಂದ ಪೌಲನು ಕೊರಿಂಥದಲ್ಲಿರುವದಕ್ಕೆ ಪೂರ್ವದಲ್ಲಿ ಸಾವಿರಾರು ವರ್ಷಗಳ ಹಿಂದೆಯೇ ಪರಿಚಯಿಸಲಾಯಿತು. ಗ್ರೀಕ್ ಪುರಾಣ ದೇವತೆಯನ್ನು ಸ್ವೀಕರಿಸಿತು ಮತ್ತು ಎಫ್ರೋದವು ದೌಸ್ಯನ ಸಂತಾನ ಎಂದು ಪ್ರಕಟಿಸಿತು.

ಫೋಯನಿಕೆಯ - ಕಾನಾನ್ಯ ಅಷ್ಟೋರೇತ (ಹಳೆಒಡಂಬಡಿಕೆಯಲ್ಲಿ "ಅಷ್ಟೋರೆತ್") ಐತಿಹಾಸಿಕವಾಗಿ ಮತ್ತು ಸಾಂಸ್ಕಂತಿಕವಾಗಿ ಗ್ರೀಕ್‌ರ ಎಫ್ರೋದೇತ ನೊಂದಿಗೆ ಸ್ಪಷ್ಟವಾಗಿ ಜೋಡಿಸಲಾಗಿದೆ. ದೇವಾಲಯದ ವೇಶ್ಯೆಯರು ಕಾನಾನಿನ ಅಪಕೀರ್ತಿಯನ್ನು ಪಡೆದಿರುವ ಲಕ್ಷಣವಿರುವ ಫಲವತ್ತತೆಯ ಧರ್ಮಶ್ರದ್ಧೆಯುಳ್ಳ ವರಾಗಿದ್ದಾರೆ. ಅದೇ ಸಮಯದಲ್ಲಿ ಅಭ್ಯಾಸವು ಗ್ರೀಕ್ ಪಟ್ಟಣದ ಧರ್ಮ ಶ್ರದ್ದೆಯಲ್ಲಿ ಎಂದಿಗೂ ಹರಡಿಲ್ಲ, ಕೆಲವು ಸ್ಥಳಗಳಲ್ಲಿ ಎಫ್ರೋದೇತನೊಂದಿಗೆ ಪವಿತ್ರ ವೇಶ್ಯಾವೃತ್ತಿ ಹೊಂದಿಕೆಯಾಗಿರುತ್ತದೆ. ಗ್ರೀಕ್ ಭೂಗೋಳ ತಜ್ಞ ಸ್ಟ್ರಾಬೋ ಹೊಸದಾಗಿ ಕಟ್ಟಿದ ಕೊರಿಂಥಕ್ಕೆ ಕ್ರಿಸ್ತನ ಜನನಕ್ಕಿಂತ ಸುಮಾರು ಮೂರು ದಶಕಗಳ ಹಿಂದೆ ಬೇಟಿನೀಡಿದ್ದನು. ಅವನು "ಎಫ್ರೋದನ ದೇವಾಲಯವು ಎಷ್ಟು ಶ್ರೀಮಂತವಾಗಿದೆಯೆಂದರೆ ಅದು ಸಾವಿರಕ್ಕೂ ಹೆಚ್ಚು ಗುಲಾಮರ ಮಾಲಿಕತ್ವವನ್ನು ಹೊಂದಿದೆ, ನಾಯಕಸಾನಿ [ವೇಶ್ಯೆ], ಪುರುಷರು ಮತ್ತು ಸ್ತ್ರೀಯರು ಇಬ್ಬರನ್ನೂ ದೇವತೆಗಳಿಗೆ ಪ್ರತಿಷ್ಠಿಸುವರು".[8] ಸ್ಟ್ರಾಬೋ ಅವರ ಪ್ರಕಾರ, ಎಫ್ರೋದನ ಧರ್ಮಶ್ರದ್ದೆ ಮತ್ತು ಅವಳ ವೇಶ್ಯೆಯರು ಪಟ್ಟಣದ ಸಂಪತ್ತಿಗೆ ಕೊಡುಗೆಯನ್ನು ನೀಡಿದರು.

ವಿಮರ್ಶನಾ ಗ್ರಂಥಗಳಲ್ಲಿ ಮೇಲಿಂದ ಮೇಲೆ ಸ್ಟ್ರಾಬೋನ ಹೇಳಿಕೆಗಳು ಕೊರಿಂಥದಲ್ಲಿ ಧರ್ಮಶ್ರದ್ದೆಯ ವೇಶ್ಯವೃತ್ತಿಯು ಪೌಲನು ಪಟ್ಟಣಕ್ಕೆ ಬೇಟಿ ನೀಡಿದಾಗ ಬಹಳವಾಗಿ ಹರಡಿಕೊಂಡಿದ್ದವು ಎಂಬುದಕ್ಕೆ ಸಾಕ್ಷಿಯಾಗಿದ್ದವು. ಇಂಥಹ ಮಾಹಿತಿಗಳು 1 ಕೊರಿಂಥ ಪುಸ್ತಕದ ಅದರಲ್ಲೂ ವಿಶೇಷವಾಗಿ ಅಪೊಸ್ತಲರು ಲೈಂಗೀಕ ಅನೈತಿಕತೆಯ ಕುರಿತು ಸಂಬೋಧಿಸಿದ ಭಾಗಗಲ್ಲಿವೆ. ಆದಾಗ್ಯೂ, ಪುನಃಕಟ್ಟಲ್ಪಟ್ಟ ರೋಮನ್ ಕೊರಿಂಥದ ವರ್ಣನೆಯನ್ನು ತೋರಿಸಲು ಸ್ಟ್ರಾಬೋ ಈ ಕೊಡುಗೆಯನ್ನು ನೀಡಿದನು ಎಂದು ಸಂದೇಹಪಡುದಕ್ಕೆ ಗಂಭೀರವಾದ ಕಾರಣಗಳಿವೆ. ಜೆರೋಮ ಮರ್ಫಿ-ಓ'ಕೊನ್ನೋರ'ರವರು. ಬೆಲೆ ಕಟ್ಟಿರುವದನ್ನು ಅನೇಕ ಸಂಪ್ರದಾಯಿಕ ಪಂಡಿತರಿಂದ ಹಂಚಿಕೊಳ್ಳಲಾಗಿದೆ:

> ಸನ್ನಿವೇಶವು ಸ್ಟ್ರಾಬೋ ಅವರು ಕ್ರಿ.ಪೂ. 146ರಕ್ಕಿಂತ ಮುಂಚಿನ ಪಟ್ಟಣವನ್ನು (ರೋಮನ್‌ರಿಂದ ನಾಶವಾಗುವುದಕ್ಕೆ ಪೂರ್ವದಲ್ಲಿದ್ದ ಪಟ್ಟಣವನ್ನು) ಉಲ್ಲೇಖಿಸಿದ್ದಾರೆಂದು, ಆತನು ಕ್ರಿ.ಪೂ. 29ರಲ್ಲಿ ಬೆಟ್ಟಿನೀಡಿದ ಹೊಸದಾಗಿ ಕಟ್ಟಿದ ರೋಮನ್ ವಸಾಹತುಗಳನ್ನು ಅಲ್ಲ ಎಂದು ಸ್ಪಷ್ಟವಾಗಿ ಸೂಚಿಸುತ್ತದೆ.[9]

ಇನ್ನೂ ಮುಂದೆ ಅನೇಕ ಸಾಂಪ್ರದಾಯಿಕ ಇತಿಹಾಸ ತಜ್ಞರು ಕ್ರಿ.ಶ.ಪೂ. 146ರ ಹಿಂದಿನ ಒಂದು ಸಾವಿರ ಧರ್ಮಪಂಥದ ವೇಶ್ಯೆಯರ ಸ್ಟ್ರಾಬೋ ಅವರ ಹೇಳಿಕೆಯನ್ನು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. ಸ್ಟ್ರಾಬೋ ಅವರು ವಂದಂತಿಗಳ ಮೇಲೆ ವರದಿಮಾಡುತ್ತಾರೆ ಮತ್ತು ಪ್ರಾಚೀನ ಲೇಖಕರು ಲೈಂಗೀಕ ವಿಷಯವನ್ನು ಭಾವನಾ ಮೂಲ

ಸಂದೇಶಕ್ಕೆ ಅಧುನಿಕದಷ್ಟೇ ಒಲವನ್ನು ತೋರಿಸಿದ್ದಾರೆ. ಅಕ್ರೋಕೊರಿಂಥದಲ್ಲಿ ಇರಬೇಕಾದ ತಮ್ಮ ವಸ್ತುಗಳನ್ನು ಎಫ್ರೋದನ ದೇವಾಲಯದಲ್ಲಿ ವೇಶ್ಯೆಯರು ರಾಶಿ ಹಾಕಿದ್ದಾರೆ, ಆದರೆ ವಾಸ್ತುಶಿಲ್ಪ ತಜ್ಞರು ಇಂಥಹ ದೇವಾಲಯಗಳಿಗೆ ಕೇವಲ ಬರಿಯ (ಬೆತ್ತಲೇ, ವಸ್ತ್ರಹೀನ) ಸಾಕ್ಷಿಯನ್ನು ಕಂಡುಕೊಂಡಿದ್ದಾರೆ-ಖಂಡಿತವಾಗಿ ಒಂದು ಸಾವಿರ ವೇಶ್ಯೆಯರಿಗೆ ಅವಶ್ಯವಿರುವ ಯಾವ ಅಳತೆಯೂ ಇಲ್ಲ.

ಆದಾಗ್ಯೂ, ಪೌಲನು ಮೊದಲು ಪಟ್ಟಣದಲ್ಲಿ ಪ್ರವೇಶಿಸಿದಾಗ ಕಂಡುಕೊಂಡ ಇಂಥಹ ಧರ್ಮಪಂಥದ ವೇಶ್ಯಾವೃತ್ತಿಯಲ್ಲಿ ಗಂಭೀರವಾದ ಸಮಸ್ಯೆಯಿದೆ. ಎಫ್ರೋದೇತನ ರೋಮನ್ ಪ್ರತಿರೂಪ ವೀನಸ ಆಗಿದ್ದಾನೆ. ಪೌಲನು ಬೇಟಿನೀಡಿದ್ದು ರೋಮ ಪಟ್ಟಣಕ್ಕೆ. ಜುಲಿಯನ್ ಕುಟುಂಬಕ್ಕೆ, ಸೀಜರನ ಕುಟುಂಬಕ್ಕೆ, ತಮ್ಮ ವಂಶಾವಳಿಯನ್ನು ವೀನಸ್‌ನೊಂದಿಗೆ ಗುರುತಿಸುತ್ತಾರೆ. ಅವರು ತಮ್ಮ ರಕ್ತದಲ್ಲಿ ದೇವತೆಗಳ ರಕ್ತವಿದೆ ಎಂದು ಹೇಳುತ್ತಾರೆ. ವೇಶ್ಯೆಯರ ಗಿರಾಕಿಗಳು ವೀನಸ್‌ನ ಆವರಣದಲ್ಲಿ ಪ್ರವೇಶಿಸುವ ವಿಚಾರ ಅರಸುಮನೆತನಕ್ಕೆ ಒಂದು ಅಪರಾಧ ಎಂದು ಯೋಚಿಸುತ್ತಾರೆ. ಇದು ಬಹುಶಃ ಸಂಭವಿಸಲಿಕ್ಕಿಲ್ಲ.

ಕೊರಿಂಥಕ್ಕೆ ಇಂದ್ರಿಯ ಸುಖದಲ್ಲಿ ತೃಪ್ತಿಪಡಿಸುವ ಹೆಸರಿದೆ, ಪವಿತ್ರಾ ವೇಶ್ಯಾವೃತ್ತಿಯನ್ನು ಒಳಗೊಂಡು. ಸ್ಟ್ರಾಬೋ, ಈ ಸನ್ನಿವೇಶವನ್ನು ವಿಮರ್ಶಿಸುತ್ತಾರೆ, ಜ್ಞಾನೋಕ್ತಿ ಹೀಗಿದೆ: “ಕೊರಿಂಥಗೆ ಪ್ರಯಾಣ ಎಲ್ಲಾ ಮನುಷ್ಯರಿಗೆ ಅಲ್ಲ.”[10] ಬರುತ್ತಾ ಹೋಗುತ್ತಾ ಇರುವ ಸಮುದ್ರಯಾನದ ಕ್ಯಾಪಟನ್ ಮತ್ತು ವ್ಯಾಪರಿಗಳು ಇಂದ್ರಾಸಕ್ತಿಯನ್ನು ತೃಪ್ತಿಪಡಿಸುವದರಲ್ಲಿ ಕೊಡುಗೆಯನ್ನು ನೀಡಿದ್ದಾರೆ. ಹೀಗಿದ್ದಾಗಲೂ, ಕೊರಿಂಥವು ಗ್ರೀಕ್ ಭಾಷೆಯನ್ನು ಮಾತನಾಡುವವರ ರಾಜಧಾನಿ ಕ್ಷೇತ್ರಗಳಲ್ಲಿ ಹೆಚ್ಚಾಗಿ ಲೈಂಗೀಕ ಜಾರತ್ವಕ್ಕೆ ಒಪ್ಪಿಸಿಕೊಟ್ಟಿದೆ. ವೇಶಾವೃತ್ತಿಯು ಎಲ್ಲೆಡೆ ಇದೆ. ಅದೇ ಸಮಯದಲ್ಲಿ ಸಲಿಂಗರತಿಯಲ್ಲಿ ತೊಡಗಿಸಿಕೊಂಡಿದ್ದಾರೆ ಎಂದು ಹೀನೈಸಲಾಗಿದೆ. ಮನುಷ್ಯನ ಜೀವಿತವು ಅಗ್ಗವಾಗಿದೆ. ಮಕ್ಕಳನ್ನು ಸಾಮಾನ್ಯವಾಗಿ ಗರ್ಭಪಾತ ಮಾಡಿಸಲಾಗುತ್ತದೆ ಅಥವಾ, ಒಮ್ಮೆ ಜನಿಸಿದ ಮೇಲೆ ಇಂಥಹ ಅಂಶಗಳಿಗೆ ಬಹಿರಂಗಪಡಿಸಲಾಗುತ್ತದೆ. ಯೆಹೂದ್ಯ ಗುರುಗಳು ಯೆಹೂದ್ಯೇತರರ ನೈತಿಕತೆಯನ್ನು ತಿರಸ್ಕಾರದಿಂದ ನೋಡುತ್ತಾರೆ.

ಇತರ ಗ್ರೀಕ್ ಪಟ್ಟಣಗಳಂತೆ ಕೊರಿಂಥವು ಅನೇಕ ದೇವರುಗಳನ್ನು ಹೊಂದಿದೆ. ಇದರೊಟ್ಟಿಗೆ ಅಪೊಲೋ ಮತ್ತು ಎಫ್ರೋದೇತ/ವೀನಸ್, ಚಿಕ್ಕ ದೇವರುಗಳು, ಜಲದೇವತೆ, ಗಿರಿದೇವತೆ, ವನದೇವತೆ, ಪ್ರಾಣಿಯ ದೇಹವನ್ನು ಹೊಂದಿದ ಗ್ರೀಕ್ ದೇವತೆಗಳು ಪ್ರತಿಯೊಂದು ನದಿಯ ಮೂಲಗಳಲ್ಲಿ ಮತ್ತು ಪ್ರತಿಯೊಂದು ಮರಗಳ ಅಡವಿಯಲ್ಲಿ ಕಂಡು ಬರುತ್ತವೆ. ಪೌಲನು ಕೊರಿಂಥದಲ್ಲಿ ಅಲೆದಾಡುತ್ತಿರುವಾಗ, ಆತನು ವಿಗ್ರಹಗಳನ್ನು ಮತ್ತು ಓಲೈಪಿಯನ್ ದೇವರುಗಳ ಮತ್ತು ಧರ್ಮಪಂಥದ ನಾಯಕರ ಸಣ್ಣ ದೇವಾಲಯಗಳನ್ನು ಹಾದುಹೋಗಿರಬಹುದು ಮತ್ತು ದೇವರ, ದೇವತೆಗಳ ಜಲದೇವತೆ, ಗಿರಿದೇವತೆ, ವನದೇವತೆ, ಪ್ರಾಣಿಯ ದೇಹವನ್ನು ಹೊಂದಿದ ಗ್ರೀಕ್ ದೇವತೆಗಳು ಪ್ರದರ್ಶಿಸುವ ಕಲಾಕೃತಿಯನ್ನು, ಅನೇಕಾವರ್ತಿ ಅಲೈಂಗಿಕ ಆಕೃತಿಯಲ್ಲಿ ನೋಡಿರಬಹುದು.

ಎಸ್ಸಕಲೀಪಸ್ ಮತ್ತು ದೇಮಿತ್ರಿ ಸಹ ಉಲ್ಲೇಖಿಸಲಾಗಿದೆ. ಸ್ವಸ್ಥತೆಯ ದೇವರಾದ ಎಸ್ಸಕಲೀಪಸನ ದೇವಾಲಯವನ್ನು ರೋಮನ್ ಚಾವಡಿಯ ಪಶ್ಚಿಮಕ್ಕಿರುವ ಗೋಡೆಯಲ್ಲಿ

ಪ್ರತಿಷ್ಠಿಸಿರುವದನ್ನು ಸಂಶೋಧಿಸಲಾಗಿದೆ. ದೇವರ ಮೇಲೆ ದೃಷ್ಟಿಸಿ ಸ್ವಸ್ಥತೆಯನ್ನು ಹೊಂದುವ ಪ್ರಾಮುಖ್ಯ ಕೇಂದ್ರಕ್ಕೆ ಕೊರಿಂಥವು ಮನೆಯಾಗಿದೆ. ಯಾತ್ರಿಕರು ಈಶಾನ್ಯ ಪೆಲೊಪೊನ್ನಸೆಸ್ಸ್‌ನಲ್ಲಿರುವ ಏಪಿದೌರಸ್‌ಗೆ[11] ಸಮೂಹವಾಗಿ ಬರುತ್ತಾರೆ ಅಲ್ಲದೇ ಏಶಿಯಾದ ಪೆರ್ಗಮ್‌ನ ದ್ವೀಪ ಕೊಶದಲ್ಲಿರುವ ಸ್ವಸ್ಥತೆಯ ಕೇಂದ್ರಕ್ಕೆ ಬರುತ್ತಾರೆ. ಎಸ್ಸಕಲೀಪಸ್ಸೀಕ್‌ರಿಗೆ ಒಬ್ಬ ಜನಪ್ರಿಯ ದೇವರಾಗಿದ್ದಾನೆ, ಗ್ರೀಕ್‌ದೇಶಗಳಿಗೆ ಹೊಸಬನಾಗಿದ್ದರೂ ಸಹ. ವಸ್ತುಶಾಸ್ತ್ರಜ್ಞರು ಕೊರಿಂಥದಲ್ಲಿರುವ ಎಸ್ಸಕಲೀಪಸ್ ನ ಸ್ಥಳದ ಬಚ್ಚಿಡುವ ಸ್ಥಳದಲ್ಲಿ ಮೂರ್ತಿಗಳನ್ನು ಅಂದಗೊಳಿಸುವ ಬಿರುಸಾದ ಮಣ್ಣಿನಿಂದ ಮಾಡಿದ ದೇಹದ ಭಾಗಗಳನ್ನು ಕಂಡುಕೊಂಡಿದ್ದಾರೆ. ಅವು ಬಹುಶಃ ಸ್ವಸ್ಥತೆಯ ವಿಶಿಷ್ಟವಾದ ಬೇಡಿಕೆಗಳನ್ನು ದೇವರು ಮರೆಯಬಾರದು ಎಂದು ಜ್ಞಾಪಿಸಲು ಅಥವಾ ಆತನಿಂದ ಸ್ವಸ್ಥೆಯನ್ನು ಹೊಂದಿದಾಗ ಸ್ತುತಿಸುವದನ್ನು ಜ್ಞಾಪಿಸುವ ಉದ್ದೇಶದಿಂದ ಇರಬಹುದು. ಪೌಲನು ಪಟ್ಟಣಕ್ಕೆ ಬೇಟಿನೀಡಿದಾಗ ಪದೇಪದೇ ನೋಡುವ ಸ್ಥಳವಾಗಿತ್ತು.

ಪಟ್ಟಣದ ಉತ್ತರಕ್ಕೆ, ಎಕ್ರೋಕೊರಿಂಥದ ಇಳಕಲಿನಲ್ಲಿ, ದೇಮೇತ್ರಿ ದೇವತೆಯ ಮತ್ತು ಅವಳ ಮಗಳು ಪರಸಿಪೊನೆಯ ದೇವಾಲಯದ ಅವಶೇಷಗಳಿದ್ದವು. ಹೆಣ್ಣುಮಕ್ಕಳು ಈ ಸ್ಥಳಕ್ಕೆ ಅನ್ಯೋನ್ಯತೆ ಮತ್ತು ಬೋಜನವನ್ನು ಹಂಚಿಕೊಳ್ಳುವದಕ್ಕಾಗಿ ಬರುತ್ತಿರಬಹುದು. ಇನ್ನಿತರ ಕಲಾಕೃತಿಗಳಲ್ಲಿ ವಸ್ತುಶಾಸ್ತ್ರಜ್ಞರು ಭೂಮಿಯ ಮೇಲೆ ಮಣ್ಣಿನ ಹಲಿಗೆಗಳನ್ನು ಕಂಡುಕೊಂಡಿದ್ದರು. ಅದರ ಮೇಲೆ ಶಾಪಗಳನ್ನು ಬರೆಯಲಾಗಿತ್ತು. ದೇವತೆಗಳ ಭಕ್ತರು ವೈರಿಗಳ ಮೇಲೆ ದ್ವೇಷವಿರುವಾಗ ಹಲಿಗೆಯ ಮೇಲೆ ಶಾಪವನ್ನು ಬರೆಯುತ್ತಿದ್ದರು, ಅದನ್ನು ದೇವಾಲಯದ ಆವರಣದಲ್ಲಿ ಹುಗಿಯುತ್ತಿದ್ದರು ಮತ್ತು ದೇವತೆಗಳಿಗೆ ಮುಯ್ಯಿ ತೀರಿಸುವಂತೆ ಬೇಡಿಕೊಳ್ಳುತ್ತಿದ್ದರು. ಪುರಾಣ ಕಥೆಗಳಲ್ಲಿ ಪೇರಸಿಪೊನ (Persephone) ಪ್ಲೂಟೋನೊಂದಿಗೆ ಸಂಬಂಧಹೊಂದಿದ್ದನು, ಕೆಳಗಿನ ಲೋಕದ ದೇವರಾಗಿದ್ದನು. ಇಂಥಹ ದೇವರುಗಳು ವಿಶೇಷವಾಗಿ ವೈರಿಯ ಮೇಲೆ ಶಾಪವನ್ನು ಪ್ರಕಟಿಸುವದಕ್ಕೆ ಬಯಸುವಾಗ ಉಪಯುಕ್ತವಾಗಿದ್ದವು ಎಂದು ಪರಿಗಣಿಸುತ್ತಿದ್ದರು.

ಕೊರಿಂಥದಲ್ಲಿ ಮತ್ತು ಅದರ ಸುತ್ತಲೂ ಇರುವ ಹೊಸ ಸ್ಥಳಗಳಲ್ಲಿ ಆರಾಧಿಸುತ್ತಿದ್ದ ಕೆಲವು ದೇವರುಗಳಿದ್ದವು. ಪೂರ್ವದಿಕ್ಕಿನಲ್ಲಿರುವ ರಹಸ್ಯ ಧರ್ಮಪಂಥಗಳು ಜನಪ್ರಿಯವಾಗಿದ್ದವು. ಏಶಿಯಾ ಮೈನರನಲ್ಲಿ ಪ್ರಾಚೀನ ವಾಸ್ತುಶಾಸ್ತ್ರಜ್ಞರು ಸೈಬೆಲ್‌ರವರ ಮುಖ್ಯ ಪರಿಚಾರಿಕೆಯ ಮತ್ತು ಎಡೋನಿಸ್ ಎಂಬ ತರುಣ ಸಹಭೋಗಿಯ ಸೂಕ್ಷ್ಮ ವಿವರಣ ಚಿತ್ರಗಳಿದ್ದವು. ಕೆಂಕ್ರೆಯದಲ್ಲಿ ಐಸಿಸ್ ಧರ್ಮಪಂಥ ಕೇಂದ್ರವು ಅಭಿವೃದ್ಧಿಪಥದಲ್ಲಿತ್ತು, ಪ್ರಾಚೀನ ಐಗುಪ್ತದ ದೇವತೆ. ಸೈಬೆಲ್ ಮತ್ತು ಐಸಿಸ್ ಇಬ್ಬರೂ ಸಂಪೂರ್ಣವಾಗಿ ಗ್ರೀಕ ವಿಧಾನಗಳನ್ನು ರಹಸ್ಯ ಆಚಾರ ಮತ್ತು ಇತರ ಸಂಪ್ರದಾಯಗಳ ಮೂಲಕ ಪೌಲನ ಸಮಯದಿಂದ ಅಳವಡಿಸಿಕೊಂಡಿದ್ದರು. ರೋಮನ್ ಕೊರಿಂಥದಲ್ಲಿ ಇನ್ನೊಂದು ಧಾರ್ಮಿಕ ತಂಡವು ಗಮನೀಯವಾಗಿತ್ತು. ವಾಸ್ತುಶಾಸ್ತ್ರಜ್ಞರು ಕೊರಿಂಥದ ಸಭಾಸ್ಥಾನದ ವೇದಿಕೆಯ ಬಳಿಯಲ್ಲಿ ಕಟ್ಟಿರುವ ದೊಡ್ಡ ದೇವಾಲಯದ ಅಸ್ತಿವಾರವನ್ನು ಮತ್ತು ಕಟ್ಟಡದ ಕೆಲವು ಸಲಕರಣೆಗಳನ್ನು ಬಹಿರಂಗಪಡಿಸಿದ್ದರು. ರೋಮನ್ ದೇವಾಲಯಗಳು, ಗ್ರೀಕ್ ದೇವಾಲಯಗಳಲ್ಲ, ಇಂಥಹ ಶೈಲಿಯಲ್ಲಿ ಕಟ್ಟಲ್ಪಟ್ಟಿದ್ದವು. ಉತ್ತಮವಾದ ವಿವರಣೆ ಎಂದರೆ ದೇವಾಲಯವು ಕೊರಿಂಥದಲ್ಲಿದ್ದ ಚಕ್ರವರ್ತಿ ಕಲ್ಟನ ಭಾಗವಾಗಿತ್ತು ಬಹುಶಃ ಇದನ್ನು

ಅಗಷ್ಟಸ್ ರೋಗಪೀಡಿತ ಹೆಂಡತಿ ಮತ್ತು ಟೈಬೇರಿಯಸ್ಸ್‌ನ ಮಗಳು ಲಿವಿಯಾಳ ಗೌರವಾರರ್ಥ ಕಟ್ಟಿರಬಹುದು. ಪೌಲಸಮಕ್ಕೆ ಚಕ್ರವರ್ತಿಯ ಆರಾಧನೆ ಬಹಳವಾಗಿ ಬೇರೂರಿತ್ತು ಅರಸು ಮನೆತನದ ಮರಣ ಹೊಂದಿದ ಸದಸ್ಯರನ್ನು ಮಾತ್ರ ಆರಾಧಿಸುತ್ತಿದ್ದರು. ಚಕ್ರವರ್ತಿಯಾದ ಕಲ್ಟ್‌ನು ಪೂರ್ವಜರ ಆರಾಧನೆಯಂತಿದ್ದನು, ಯಾರು ರೋಮನ್ ಸಿನೆಟ್‌ನಿಂದ ದೇವರು ಎಂಬ ಪ್ರಕಟನೆಯನ್ನು ಪಡೆದಿರುತ್ತಾರೋ ಅವರನ್ನು ಗೌರವಾರರ್ಪಣೆಗೆ ಯೋಗ್ಯರೆಂದು ಮಾನ್ಯತೆ ಪಡೆಯುತ್ತಿದ್ದರು. ಮೊದಲನೆಯ ಶತಮಾನದಲ್ಲಿ ಕಲಿಗುಲ್ಲಾ ಮತ್ತು ನ್ಯೂರೊ ತಮ್ಮನ್ನು ತಾವು ಇನ್ನೂ ಜೀವಂತ ಇರುವಾಗಲೆ ದೇವರು ಎಂದು ಪ್ರಕಟಿಸಿಕೊಂಡಿದ್ದರು. ಪೌಲನು ಅಲ್ಲಿದ್ದಾಗ, ಚಕ್ರವರ್ತಿ ಕಲ್ಟ್‌ನು ದಬಾಯಿಸಿ ವಶಪಡಿಸಿಕೊಂಡ ಜನರು ಎನ್ನನ್ನೂ ಮಾಡಲಿಕ್ಕಿರಲಿಲ್ಲ. ಇತರ ಧಾರ್ಮಿಕ ರಚನೆಗಳಂತೆ, ಚಕ್ರವರ್ತಿ ಕಲ್ಟನು ಜನರ ಮೇಲೆ ಪ್ರಭಾವ ಇರದೇ ಇರುವ ತಂಡಗಳಿಗೆ ವಿವರಣೆಯನ್ನು ನೀಡಿದನು.

ಕೊರಿಂಥದಲ್ಲಿ ಪೌಲನು ಶ್ರೀಮಂತ ಮತ್ತು ವೈವಿಧ್ಯಮಯ ಧಾರ್ಮಿಕ ದೃಶ್ಯವನ್ನು ಕಂಡುಕೊಂಡಿರಬಹುದು ಅದನ್ನು ಶತಮಾನಗಳ ವರೆಗೆ ಭದ್ರವಾಗಿ ಹಿಡಿದುಕೊಂಡಿರಬಹುದು. ಆತನ ಸಂದೇಶ ಸ್ವಂತ ದೇಶದ ಜನರು ಆರಾಧಿಸುತ್ತಿದ್ದ ಎಲ್ಲಾ ದೇವತೆಗಳು ಪ್ರಯೋಜನವಿಲ್ಲದ ಮೂರ್ತಿಗಳಾಗಿದ್ದವು. ಒಬ್ಬನೇ ನಿಜವಾದ ದೇವರು ಇಸ್ರಾಯೇಲರಿಗೆ ಮೋಶೆಯ ಮತ್ತು ಹಳೆಒಡಂಬಡಿಕೆಯ ಪ್ರವಾದಿಗಳ ಮೂಲಕ ಪ್ರಕಟಗೊಂಡಿದ್ದನು; ನಂತರ ಹೊಸ ಒಡಂಬಡಿಕೆಯಲ್ಲಿ ಆತನು ಕ್ರೂಜೆಗೆ ಹಾಕಲ್ಪಟ್ಟ, ಯೇಸುಕ್ರಿಸ್ತನ ಮೂಲಕ ಎಲ್ಲಾ ಜನರಿಗೆ ಪ್ರಕಟಿಸಿಕೊಂಡನು. ಈ ಮೂರ್ತಿ ಪೂಜಕರಿಗೆ ಜೀವಿಸುವ ದೇವರ ಕುರಿತಾಗಿ ಇದನ್ನು ಬೋಧಿಸುವದು ಕಠಿಣವಾದ ಕಾರ್ಯವಾಗಿತ್ತು.

## ಕೊರಿಂಥದಲ್ಲಿ ಕ್ರೈಸ್ತ ಸಮುದಾಯವನ್ನು ಕಟ್ಟುವದು

ಕೊರಿಂಥಕ್ಕೆ ಪೌಲನು ಆಗಮಿಸಿದಾಗ, ಅವನು ತನ್ನ ಮಾರ್ಗವನ್ನು ಪಟ್ಟಣದ ದಾರಿಗಳ ಸುತ್ತಲು ಕಲಿಯುವ ಅವಶ್ಯಕತೆಯಿತ್ತು. ಬೇಗನೇ, ಅವನು ಯೆಹೂದ್ಯ ಸಮುದಾಯವನ್ನು ಗುರುತಿಸಲು ಪ್ರಾರಂಭಿಸಿದನು. ಯೆಹೂದ್ಯರು ರೋಮನ್ ಲೋಕದ ಅನೇಕ ರಾಜಧಾನಿ ಕೇಂದ್ರಗಳಲ್ಲಿ ಉಪಸ್ಥಿತರಿದ್ದರು. ಅವರಲ್ಲಿ ಕೆಲವರು ಗುಲಾಮರು ಅಥವಾ ಬಡವರಿದ್ದರು, ಆದರೆ ಇತರರು ವ್ಯಾಪಾರಿಗಳು ಮತ್ತು ಶ್ರೀಮಂತರಾಗಿದ್ದರು. ದೇಶದ ಜನರು ಯಾರಾದರೂ ಆ ಮಾರ್ಗವಾಗಿ ಸಂಚರಿಸುತ್ತಿದ್ದರೆ ಅವರು ಇಳಿದುಕೊಳ್ಳುವದಕ್ಕೆ ಕೆಲವು ಚಿಕ್ಕ ಕೋಣೆಗಳು ಅವರ ಮಹಾದೇವಾಲಯಕ್ಕೆ ಹೊಂದಿಕೊಂಡಿದ್ದವು. ಇಲ್ಲವಾದಲ್ಲಿ, ಅನ್ನಪಾನಕ್ಕೆ ಯೋಗ್ಯವಾದ ಆಹಾರ ಸಿಕ್ಕುವದು ಬಹಳ ಕಠಿಣವಾಗಿತ್ತು. ಅಪೊಸ್ತಲರು ತಮಗೆ ಇಂಥಹ ಕೋಣೆಗಳನ್ನು ಪಡೆದುಕೊಳ್ಳುತ್ತಿದ್ದರು.

ಕೊರಿಂಥದ ಪ್ರಾಚೀನ ವಸ್ತುಗಳ ವಸ್ತು ಸಂಗ್ರಹಾಲಯದಲ್ಲಿ ಪ್ರಾಚೀನ ದೇವಾಲಯದ ಚೌಕಟ್ಟಿನ ಮೇಲಿರುವ ತುಂಡಿನಂತೆ ತೋರಿಬರುವ ಗ್ರೀಕ ಶಿಲಾ ಲೆಖನಗಳನ್ನು ಎದ್ದು ಕಾಣುವಂತೆ ಪ್ರದರ್ಶಿಸಿದ್ದರು. “ಇಬ್ರಿಯರ ದೇವಾಲಯ” ಎಂಬ ಗ್ರೀಕ್ ಪದದ ಭಾಗ ಪಠಣ ಯೋಗ್ಯವಾಗಿತ್ತು. ಸ್ಥಳದಲ್ಲಿ ಆದಿ ಪ್ರಾಚೀನ ವಸ್ತುಶಾಸ್ತ್ರದ ಕಾರ್ಯದ ಕಲ್ಲಿನ ಮೇಲೆ ಪೂರ್ವೊ ತ್ತರ ಸಂಬಂಧ ಕಂಡು ಬರುತ್ತಿರಲಿಲ್ಲ. ನೂರು ವರ್ಷಕ್ಕಿಂತ ಹೆಚ್ಚು ಹಿಂದಿನ. ಶಿಲಾ

ಲೇಖನದ ದಿನಾಂಕವನ್ನು ಗುರುತಿಸುವದು ಕಠಿಣವಾಗಿತ್ತು; ಆದರೆ ಬರವಣಿಗೆಯ ಶೈಲಿಯನ್ನು ಆದರಿಸಿ, ಅನೇಕ ಪರಿಣಿತರು ಇದು ಪೌಲನ ಬೇಟಿಯ ನಂತರದ ಕೆಲವು ನೂರು ವರ್ಷಗಳ ನಂತರದ್ದು ಇರಬಹುದು ಎಂದು ತಿರ್ಮಾನಿಸಿದ್ದರು. ಕಲ್ಲು ಪಟ್ಟಣದಲ್ಲಿ ಯೆಹೂದ್ಯರ ಉಪಸ್ಥಿತಿಯನ್ನು ರುಜುವಾತುಪಡಿಸುತಿತ್ತು.

ಬಹುಶಃ ಪೌಲನು, ಆರಾಧನೆಯನ್ನು ಮಾಡುತ್ತಿದ್ದವರೊಳಗೆ ಒಬ್ಬ ದಂಪತಿಗಳನ್ನು ಕಂಡುಕೊಂಡನು ಅವರೊಂದಿಗೆ ಆತನ ಜೀವಿತವು ಅನೇಕ ವರ್ಷಗಳ ವರೆಗೆ ಹೆಣೆದುಕೊಂಡಿತ್ತು. ಅವರು ಅಕ್ವಿಲ್ ಮತ್ತು ಪ್ರಿಸ್ಕಿಲ್, ಅಥವಾ ಪೌಲನು ಅವರನ್ನು ನಿರಂತರವಾಗಿ "ಅಕ್ವಿಲನೂ ಮತ್ತು ಪ್ರಿಸ್ಕಳೂ" ಎಂದು ಕರೆಯುತ್ತಿದ್ದನು (16:19). ಅವರು ಎಲ್ಲೆಡೆ ಸಂಚರಿಸುತ್ತಿದ್ದ ಚರ್ಮದ ವಸ್ತುಗಳನ್ನು ಮಾರಾಟಮಾಡುವ ಮತ್ತು ಗುಡಾರಗಳನ್ನು ತಯಾರಿಸುವ ವ್ಯಾಪಾರಿಗಳಾಗಿದ್ದರು (ಅ.ಕೃ. 18:3). ನಂತರ ಅವರು ಕೊರಿಂಥಕ್ಕೆ ಬಂದರು; ಆದರೆ ಅವರ ಪೂರ್ವಜರ ದೇಶವು ಪೋಂತ್ಯನ ರೋಮನ್ ಕ್ಷೇತ್ರವಾಗಿತ್ತು, ಉತ್ತರ ಮತ್ತು ದಕ್ಷಿಣಕ್ಕೆ ಹಬ್ಬಿಕೊಂಡಿರುವ ಕಪ್ಪುಸಮುದ್ರದ ಪಶ್ಚಿಮ ಕ್ಷೇತ್ರವಾಗಿತ್ತು. ಅವರ ಸ್ವಂತ ಪಟ್ಟಣ ಸಿನೋಪ್ ಆಗಿರಬಹುದು, ವ್ಯಾಪರಾಕ್ಕಾಗಿ ಉತ್ತಮವಾಗಿ ಸ್ಥಾಪಿಸಲ್ಪಟ್ಟ ಪ್ರಾಮುಖ್ಯವಾದ ಪಟ್ಟಣವಾಗಿತ್ತು. ಲೂಕನು ರೋಮಕ್ಕೆ ನಡೆಸಿದ ಸನ್ನಿವೇಶವನ್ನು ವರ್ಣಿಸಿಲ್ಲ, ಆದರೆ ದಾರಿಗಳು ಮತ್ತು ಚಕ್ರವರ್ತಿಯ ಹಡಗಿನ ಮಾರ್ಗಗಳು ಇಟಲಿಯ ದ್ವೀಪಕ್ಕೆ ನಡೆಸುತ್ತಿದ್ದವು. ದಂಪತಿಗಳು ಬಹುಶಃ ತಮ್ಮ ಕಾರ್ಯಾಗಾರಕ್ಕೆ ದ್ವಾರಗಳನ್ನು ಸಿನೋಪನಲ್ಲಿ ಮತ್ತು ಪೊಂತ್ಯದಲ್ಲಿರುವ ಇತರ ಪಟ್ಟಣಗಳಲ್ಲಿ ಕಂಡುಕೊಂಡಿರಬಹುದು. ಅವರು ರೋಮನಲ್ಲಿ ವಾಸವಾಗಿದ್ದರೂ, ಹಾಗೂ, ಅಡತಡೆ ಉಂಟಾಯಿತು. ರಾಜಕೀಯ ಸಂಗತಿಗಳು ಅವರ ಹತೋಟಿಯಲ್ಲಿರಲಿಲ್ಲ ಅದು ಅವರು ಹೊರಗೆ ಹೋಗುವದಕ್ಕೆ ಕಾರಣವಾಯಿತು (ಅ.ಕೃ. 18:2).

ರೋಮನ್ ಐತಿಹಾಸಿಕ ತಜ್ಞರು ಕೊರಿಂಥದ ಅಕ್ವಿಲ್ ಮತ್ತು ಪ್ರಿಸ್ಕಿಲ್‌ರ ಸಮಕಾಲೀನರು, ಸುಮಾರು ಈ ಸಮಯದಲ್ಲಿ ರೋಮ ಸಮುದಾಯದ ಯೆಹೂದ್ಯರಲ್ಲಿ ತುಮುಲವನ್ನು ದಾಖಲಿಸುತ್ತಾರೆ. ಎರಡನೆಯ ಶತಮಾನದ ಪ್ರಾರಂಭದ ಬರಹಗಳಲ್ಲಿ, ಸ್ಯುಟೋನಿಯಸ್ ಚಕ್ರವರ್ತಿ ಕ್ಲೌದ್ಯನು ಪೌಲನು ಕೊರಿಂಥಕ್ಕೆ ಆಗಮಿಸುವ ಒಂದು ಅಥವಾ ಎರಡು ವರ್ಷಗಳ ಪೂರ್ವದಲ್ಲಿ ಯೆಹೂದ್ಯರನ್ನು ರೋಮನಿಂದ ಹೊರಕ್ಕೆ ಹಾಕಿದನು ಎಂದು ದಾಖಲಿಸುತ್ತಾನೆ. ಇತಿಹಾಸ ತಜ್ಞರು ಗಲಭೆಯು "ಕ್ರಿಷ್ಟಸ್‌ನ ಪ್ರಚೋದನೆಯಿಂದಾಗಿ"[12] ಎಂದು ಹೇಳುತ್ತಾರೆ. ಈ "ಕ್ರಿಷ್ಟಸ್‌ನ" ವ್ಯಕ್ತಿತ್ವದ ವಿಷಯ ದೊಡ್ಡ ಉಹಾಪೊಹವಾಯಿತು. ಹೆಸರಿನ ಅರ್ಥ "ಕರುಣಾಳು" ಅಥವಾ "ಉದಾರಿ" ಲ್ಯಾಟಿನ ಭಾಷೆಯನ್ನು ಮಾತನಾಡುವ ಕ್ಷೇತ್ರಗಳ ಗುಲಾಮರಲ್ಲಿ ಹೆಚ್ಚು ಸಮಾನ್ಯವಾಗಿತ್ತು. ಜ್ಞಾನಿಯಾದ "ಕ್ರಿಷ್ಟಸ್" ಎಂಬ ಹೆಸರಿನ ಬೇರೆ ಅಪರಿಚಿತ ಮನುಷ್ಯ ಯೆಹೂದ್ಯ ಸಮುದಾಯವನ್ನು ಅಸಮಾಧಾನದ ವಿಷಯಕ್ಕಾಗಿ ಎಬ್ಬಿಸಿರಬಹುದು ಎಂಬುದನ್ನು ಸಿದ್ಧಾಂತಪಡಿಸಲಾಗಿಲ್ಲ. ಅದಕ್ಕೂ ಹೆಚ್ಚಾಗಿ, "ಕ್ರಿಷ್ಟಸ್" ಇದರ ಉಚ್ಚಾರಣೆ "ಕ್ರಿಸ್ಟಸ್" ಎಂಬ ಉಚ್ಚಾರಣೆಗೆ ನಿಕಟವಾಗಿದೆ "ಕ್ರಿಸ್ತನು" ಎಂಬ ಪದಕ್ಕೆ ಲ್ಯಾಟಿನ್ ಪದವಾಗಿದೆ. ಭಿನ್ನಾಭಿಪ್ರಾಯ ಮತ್ತು ಗಲಭೆ ಬಹಳ ಮಟ್ಟಿಗೆ ರೋಮನ್ ಯೆಹೂದ್ಯರಲ್ಲಿ ಯೂದಾಯದ ಸಂಗತಿಗಳ ಕುರಿತು ಬೆಳೆದಿರಬಹುದು - ನಿರ್ಧಿಷ್ಟವಾಗಿ, ನಜರೇತಿನ ಯೇಸು ದೇವರ ಕ್ರಿಸ್ತನಾಗಿದ್ದಾನೆ ಎಂಬ ವಿಷಯದ ಕುರಿತಾಗಿ. ರೋಮನ್

ಅಧಿಕಾರಿಗಳು ಗಲಭೆಯನ್ನು ಸಹಿಸುವದು ಬೇಡ ಎಲ್ಲಾ ಯೆಹೂದ್ಯರನ್ನು ಪಟ್ಟಣದಿಂದ ಉಚ್ಛಾಟನೆ ಮಾಡೋಣ ಎಂಬುದನ್ನು ಆಯ್ದುಕೊಂಡಿರಬಹುದು.

ಒಂದು ವೇಳೆ ರೋಮನಲ್ಲಿರುವ ಯೆಹೂದ್ಯರ ಮಧ್ಯದಲ್ಲಿರುವ ಅಸಮಾಧಾನ ಕ್ರೈಸ್ತತ್ವವನ್ನು ಪರಿಚಯಿಸಿದ ಕಾರಣದಿಂದಾಗಿದ್ದಲ್ಲಿ, (ಕ್ರಿ.ಶ. 49ರ ಕುರಿತು) ಇದು ಇದರ ಮುಂಚಿನ ದಿನಾಂಕಕ್ಕೆ ಗಮನಾರ್ಹವಾಗಿದೆ. ಕ್ಲೂಜೆಯ ಮರಣ ಮತ್ತು ಕರ್ತನ ಪುನರುತ್ಥಾನದ ನಂತರದ ಇಪ್ಪತ್ತು ವರ್ಷಗಳಿಗಿಂತ ಕಡಿಮೆ ಇದು ಸಂಭವಿಸಿರಬಹುದು. ಎಲ್ಲಕ್ಕಿಂತಲೂ ಹೆಚ್ಚಾಗಿ, ಪೌಲನು ಅಕ್ವಿಲ್ ಮತ್ತು ಪ್ರಿಸ್ಕಿಲರನ್ನು ಬೇಟಿಯಾಗುವ ಪೂರ್ವದಲ್ಲಿ, ಅವರು ಆಗಲೇ ಕ್ರೈಸ್ತರಾಗಿದ್ದರು. ಪವಿತ್ರ ದಾಖಲೆಗಳು ಅಪೊಸ್ತಲರ ಬೋಧನೆ ಕುರಿತಾಗಲೆ ಅಥವಾ ಅವರ ದೀಕ್ಷಾಸ್ನಾನದ ಕುರಿತಾಗಲಿ ಏನನ್ನೂ ಹೇಳುವದಿಲ್ಲ. ಎಫ್. ಏಫ್. ಬ್ರೂಸ್ ಅವರು ಈ ರೀತಿಯಲ್ಲಿ ಮುಕ್ತಾಯ ಗೊಳಿಸುತ್ತಾರೆ,

> ಅವರಿಗೆ ಪೌಲನ ಕೆಲವು ಉಲ್ಲೇಖಗಳಲ್ಲಿ ಅವರು ಆತನಿಂದ ಮತಾಂತರ ಹೊಂದಿದವರೆಂಬ ಸೂಚನೆಗಳು ಏನಾದರು ಇವೆಯೋ: ಎಲ್ಲಾ ಸೂಚನೆಗಳು ಅವರು ಆತನನ್ನು ಸಂಧಿಸುವ ಪೂರ್ವದಲ್ಲಿಯೇ ಕ್ರೈಸ್ತರಾಗಿದ್ದರು ಎಂಬುದನ್ನು ಸೂಚಿಸುತ್ತವೆ ಮತ್ತು ಅದಕ್ಕನುಗುಣವಾಗಿ ಅವರು ರೋಮನ್‌ಲ್ಲಿ ವಾಸಿಸುತ್ತಿರುವಾಗಲೇ ಕ್ರೈಸ್ತರಾಗಿದ್ದರು . . .[13]

ಪೌಲನು ದಂಪತಿಗಳೊಂದಿಗೆ ವ್ಯಾಪಾರವನ್ನು ಮಾತ್ರ ಹಂಚಿಕೊಳ್ಳಲಿಲ್ಲ, ಅವನು ಮತ್ತು ಅವರು ಒಂದೇ ನಂಬಿಕೆಯನ್ನು ಅಪ್ಪಿಕೊಂಡಿದ್ದರು. ಕೊರಿಂಥದಲ್ಲಿದ್ದ ಕ್ರೈಸ್ತ ಸಮುದಾಯ ಪೌಲನು ಪಟ್ಟಣಕ್ಕೆ ಬರುವ ಪೂರ್ವದಲ್ಲಿಯೇ ಪ್ರಾರಂಭವಾಗಿತ್ತು.

ಅಕ್ವಿಲ್ ಮತ್ತು ಪ್ರಿಸ್ಕಿಲ್‌ರು ಕೊರಿಂಥದಲ್ಲಿ ಇಸ್ತಮೇನ ಆಟಗಳಿಂದಾಗಿ ನೆಲೆಸಿರಬಹುದು ಪ್ರಯಾಣಿಕರು ಆಟಗಳಿಗಾಗಿ ಬರುವಾಗ, ಅವರಿಗೆ ಇಳಿದುಕೊಳ್ಳಲು ಸ್ಥಳಬೇಕಾಗುತಿತ್ತು. ದಂಪತಿಗಳು ತಾವು ಸಿದ್ದಪಡಿಸಿದ ಚರ್ಮದ ಗುಡಾರಗಳಿಗೆ ಕ್ರೀಡಾಪಟುಗಳ ಮತ್ತು ವೀಕ್ಷಕರ ಮಧ್ಯದಲ್ಲಿ ತಮ್ಮ ಗುಡಾರಳಿಗೆ ವ್ಯಾಪರ ದೊರೆಯುತ್ತದೆ ಎಂದುಕೊಂಡಿರಬಹುದು. ಸ್ವಲ್ಪ ಸಮಯ ಪೌಲನು ಅವರೊಂದಿಗೆ ಕೆಲಸ ಮಾಡಿದನು, ಅವರ ಕಾರ್ಯಾಗಾರದಲ್ಲಿ ಅವಕಾಶ ದೊರೆತಾಗಲೆಲ್ಲ ಜನರಿಗೆ ಕ್ರಿಸ್ತನ ಕುರಿತಾಗಿ ಬೋಧಿಸುತ್ತಿದ್ದನು. ಅಪೊಸ್ತಲನು ತನ್ನ ಕೈಗಳಿಂದ ಕೆಲಸ ಮಾಡುವದನ್ನು ವಿರೋಧಿ ಸುತ್ತಿರಲಿಲ್ಲ (1 ಥೆಸಲೋನಿಕ 2:9); ಆದರೆ ಅನೇಕ ವಾರಗಳು ಗತಿಸುವ ಪೂರ್ವದಲ್ಲಿಯೇ, ಶೀಲ ಮತ್ತು ತಿಮೋಥೆಯರು ಮೆಕೆದೋನ್ಯದಲ್ಲಿ ಕಾಣಿಸಿಕೊಂಡರು. ಅವರು ಸಹಜವಾಗಿ ಹಣವನ್ನು ತಂದರು ಇದರಿಂದಾಗಿ ಪೌಲನು ಸುವಾರ್ತೆಯನ್ನು ಸಾರುವದರಲ್ಲಿಯೂ ಮತ್ತು ಸಭೆಯನ್ನು ಕಟ್ಟುವದರಲ್ಲಿಯೂ ಪೂರ್ಣವಧಿ ಸಮರ್ಪಿಸಿಕೊಂಡನು (ಅ.ಕೃ. 18:5; 2 ಕೊರಿಂಥ 11:9).

ಆತನ ತೀವ್ರವಾದ ಪ್ರಯತ್ನಗಳನ್ನು ಯೆಹೂದ್ಯರು ವಿರೋಧಿಸುವಾಗ, ಪೌಲನು ತನ್ನ ಕೋಣೆಯಿಂದ ದೇವಾಲಯಕ್ಕೆ ಬಂದಿರಬಹುದು ಮತ್ತು ಸಮೀಪದಲ್ಲಿರುವ ತೀತಯಸ್ತನೆಂಬವನ (ಒಂದು ಲ್ಯಾಟೀನ್ ಹೆಸರು) ಮನೆಗೆ ಬಂದಿರಬಹುದು. ಪೌಲನ ಆಗಮನಕ್ಕಿಂತ ಪೂರ್ವದಲ್ಲಿ ತೀತನು “ದೇವರನ್ನು ಆರಾಧಿಸುವಾತನಾಗಿದ್ದನು” (ಅ.ಕೃ.

18:7). ಖಂಡಿತವಾಗಿ ಆತನು ಯೆಹೂದ್ಯ ಸಂಪ್ರದಾಯಗಳನ್ನು ಅಪ್ಪಿಕೊಂಡಿರಲಿಕ್ಕಿಲ್ಲ. ಆತನ ಸಮಾಕಾಲೀನರಲ್ಲಿ ಇದರ ಪ್ರಾಚೀನತೆ, ದೇವರ ಐಕ್ಯತೆಯ ಕುರಿತು ಇದರ ತಿಳುವಳಿಕೆ ಮತ್ತು ಇದರ ಶ್ರೇಷ್ಠ ನೈತಿಕ ಮಾದರಿಗಳಿಂದಾಗಿ. ಅನೇಕರು ಯೆಹೂದ್ಯ ಧರ್ಮಕ್ಕೆ ಆಕರ್ಷಿತರಾಗಿದ್ದರು. ಕ್ರಿಸ್ತನಿಂದಾಗಿ ಪೌಲನು ಸುನ್ನತಿಯ, ಪರಿಶುದ್ಧತೆಯ ಆಚಾರ ಮತ್ತು ಸುತ್ತಲೂ ತೋರಿಬರುವ ಇತರ ಸಂಗತಿಗಳು ಅವರನ್ನು ಯೆಹೂದ್ಯ ಧರ್ಮಕ್ಕೆ ಆಕರ್ಷಣೆಯನ್ನು ಒಡ್ಡಿತು, ಅದನ್ನು ಪೌಲನು ಅವರಿಗೆ ನೀಡಿರಬಹುದು. ಪೌಲನು ಯೆಹೂದ್ಯರನ್ನು ಮತ್ತು ಯೆಹೂದ್ಯೇತರರನ್ನು ಕ್ರಿಸ್ತನನ್ನು ಅರಿಕೆ ಮಾಡುವತ್ತ ನಡೆಸಿದನು. ಕ್ರಿಸ್ಪನು ಯೆಹೂದ್ಯ ಸಮುದಾಯದಲ್ಲಿ ಒಬ್ಬ ನಾಯಕ ಅವನ ಯೌವನಸ್ಥ ಮಕ್ಕಳು ಮತ್ತು ಗುಲಾಮರು ಮತ್ತು ಇನ್ನೂ ಅನೇಕ ಇತರರು ಕೊರಿಂಥಿಯರು ಮಾಡಿದಂತೆ, ಕ್ರಿಸ್ತನನ್ನು ದೀಕ್ಷಾಸ್ನಾನದಲ್ಲಿ ಧರಿಸಿದನು.

ಕ್ರಮೇಣ, ಪೌಲನು ಕೊರಿಂಥದಲ್ಲಿ ಜೀವದಿಂದುಳಿಯಲು ಬಹಳ ಯಶಸ್ವಿಯಾದನು. ಅವನು ಬಹಳವಾಗಿ ಮುಂಗೋಪಿಯಾಗಿರುವದನ್ನು ಯೆಹೂದ್ಯರು ವಿರೋಧಿಸಿದರು. ತನ್ನ ಜೀವಕ್ಕಾಗಿ ಭಯಪಟ್ಟು, ಪೌಲನು ಅಲ್ಲಿಂದ ಹೋಗಲು ನಿರ್ಧರಿಸಿದನು. ಹ್ಯಾಗೂ, ಕರ್ತನ ನೇರವಾದ ಸಂದೇಶದಿಂದಾಗಿ ಪಟ್ಟಣದಲ್ಲಿನ ಅವನ ವಾಸ ಮುಂದುವರೆಯಿತು: ಇದಲ್ಲದೇ ಕರ್ತನು ಪೌಲನಿಗೆ ರಾತ್ರಿಕಾಲದಲ್ಲಿ ದರ್ಶನ ಕೊಟ್ಟು-ನೀನು ಹೆದರಬೇಡ; ಸುಮ್ಮನಿರದೇ ಮಾತಾಡುತ್ತಲೇ ಇರು, ನಾನೇ ನಿನ್ನೊಂದಿಗೆ ಇದ್ದೇನೆ. ಯಾರೂ ನಿನ್ನ ಮೇಲೆ ಬಿದ್ದು ಕೇಡು ಮಾಡುವದಿಲ್ಲ. ಈ ಪಟ್ಟಣದಲ್ಲಿ ನನಗೆ ಬಹಳ ಮಂದಿ ಇದ್ದಾರೆ ಎಂದು ಹೇಳಿದನು (ಅ.ಕೃ. 18:9, 10). ಪೌಲನು ಬೋಧಿಸುವದನ್ನು ಮುಂದುವರೆಸಿದನು. ಪ್ರಾಚೀನ ಪಟ್ಟಣಗಳು ಹೊಸ ವಿಚಾರಗಳನ್ನು ಸ್ವೀಕರಿಸಿಕೊಳ್ಳುವದಕ್ಕೆ ಹೆಸರಾಗಿರಲಿಲ್ಲ; ಆದರೆ ಅಪೊಸ್ತಲನು "ಒಂದು ವರ್ಷ ಮತ್ತು ಆರು ತಿಂಗಳು ಪಟ್ಟಣದಲ್ಲಿ ಇರಲು ಸಮರ್ಥನಾದನು (ಅ.ಕೃ. 18:11) ಎಲ್ಲಾ ಸ್ಥಳಗಳಿಗಿಂತ ಹೆಚ್ಚು ಸಮಯ. ಅಲ್ಲಿ ಅವನ ಕಾರ್ಯ ಮುಕ್ತಾಯ ಹಂತಕ್ಕೆ ಬಂತು ಆಗ ಯೆಹೂದ್ಯ ಸಮುದಾಯದವರು ಅವನ ವಿರುದ್ಧ ದೂರುಗಳನ್ನು ಹೇರಿ ರೋಮನ ದೇಶಾಧಿಪತಿಯ ನ್ಯಾಯಸ್ಥಾನದ ಮುಂದೆ ತಂದರು. ಗಲ್ಲಿಯೋನ ಈ ದೂರಿನಿಂದಾಗಿ ಪ್ರಭಾವಿತನಾಗಲಿಲ್ಲ (ಅ.ಕೃ. 18:17). ಅವನ ಪ್ರಕಾರ, ಪೌಲ ಮತ್ತು ಯೆಹೂದ್ಯರ ಮಧ್ಯದಲ್ಲಿರುವ ಧಾರ್ಮಿಕ ಕಲಹ ಯೆಹೂದ್ಯ ಸಮುದಾಯದ ವ್ಯಕ್ತಿಗತ ವಿಷಯವಾಗಿತ್ತು ಅದನ್ನು ಅವರು ತಮ್ಮಲ್ಲಿ ತಾವೇ ಪರಿಹರಿಸಿಕೊಳ್ಳಬೇಕಾಗಿತ್ತು. ಹಾಗೂ, ನ್ಯಾಯಸ್ಥಾನವು ಕೊರಿಂಥದಲ್ಲಿ ರೋಮನ್‌ಲ್ಲಿ ಪುನರಾವರ್ತಿಸಬಾರದು ಎಂದು ಘೋಷಿಸಿತು. ಆ ಸಮಯದಲ್ಲಿ, ಪೌಲನಲ್ಲ ಸೋಸ್ಥೆನನು ದೇವಾಲಯದ ಹೊಸ ಅಧಿಕಾರಿಯಾಗಿದ್ದನು, ಅವನನ್ನು ಸಾರ್ವಜನಿಕವಾಗಿ ಅವಮಾನ ಮಾಡಿ ಮತ್ತು ಅವನನ್ನು ನ್ಯಾಯಾಸ್ಥಾನ ಮುಂದೆ ಹೊಡೆದರು. ಲೂಕನು, "ಆದರೆ ಗಲ್ಲಿಯೋನನು ಅವುಗಳಲ್ಲಿ ಒಂದನ್ನೂ ಲಕ್ಷಕ್ಕೆ ತೆಗೆದುಕೊಳ್ಳಲಿಲ್ಲ" (ಅ.ಕೃ. 18:17b) ಎಂದು ಬರೆಯುತ್ತಾನೆ.

ನ್ಯಾಯದ ಪಕ್ಷವಾಗಿ, ಗಲ್ಲಿಯೋನನು ತೀರ್ಮಾನವನ್ನು ಪರಿಗಣಿಸಿದ ಹಾಗೆ ತೋರುತ್ತದೆ: ರೋಮನ್ನರ ಪ್ರಕಾರ, ಕ್ರೈಸ್ತತ್ವವು ಯೆಹೂದ್ಯ ಧರ್ಮದ ಒಂದು ಪಂಗಡ. ಅವರು ತಮ್ಮ ಭಿನ್ನತೆಗಳನ್ನು ತಮ್ಮಲ್ಲೇ ಪರಿಹರಿಸಿಕೊಳ್ಳಬೇಕಾಗಿತ್ತು.[14] ರೋಮನ್‌ರು ಗಲಭೆಗೆ ಕಾರಣವಾಗುವ ಜಗಳಗಳನ್ನು ಸಹಿಸುವದಿಲ್ಲ. ಯೆಹೂದ್ಯರ ಮಧ್ಯದಲ್ಲಿರುವ

ಆಂತರಿಕ ಗಲಭೆ ಹರಡಿಕೊಳ್ಳುವಾಗ ಸಾರ್ವಜನಿಕ ವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತದೆ ಪ್ರತಿಯೊಬ್ಬರು ತೊಂದರೆಗೆ ಒಳಗಾಗುತ್ತಾರೆ ಎಂದು ತಿಳಿದುಕೊಂಡರು. ಆದಿ ಶತಮಾನಗಳಲ್ಲಿ ಯೆಹೂದ್ಯರಿಗೆ ಸಹ ಲಾಭದಾಯಕವಾಗುವ ರೋಮನ್‌ರ ನಿಯಮದಲ್ಲಿ, ಕ್ರೈಸ್ತರು ಸುರಕ್ಷಿತರಾಗಿರಬೇಕು. ಗಲ್ಲಿಯೋನನು ಸಹಿಸಿಕೊಂಡಾಗಲೂ, ಪೌಲನು ತಾನು ಕೊರಿಂಥದಲ್ಲಿ ವೈರಿಗಳನ್ನು ಮಾಡಿಕೊಂಡಿದ್ದೇನೆ, ಅವರು ತನ್ನನ್ನು ಏಕಾಂಗಿಯಾಗಿರಲು ಬಿಡುವದಿಲ್ಲ ಎಂಬುದನ್ನು ಅರಿತುಕೊಂಡನು. ಸ್ವಲ್ಪ ಸಮಯ ಅವನು ಯೆರೂಸಲೇಮಿಗೆ ಹೋಗದೇ ಇರುವ ಕಾರಣ, ಅವನು ಪಟ್ಟಣದಲ್ಲಿರುವ ಕ್ರೈಸ್ತರನ್ನು, ತನ್ನ ಸ್ವಂತ ಕಾರ್ಯದ ಕುರಿತು ವರದಿ ಮಾಡಲು ಮತ್ತು ಅಲ್ಲಿನ ಬೆಳವಣಿಗೆಗಳ ಕುರಿತು ಕಲಿಯಲು ಬೆಟ್ಟಿ ನೀಡಲು ನಿರ್ಧರಿಸಿದನು. ಅದಾದ ನಂತರ, ಅವನು ಸಾಮ್ರಾಜ್ಯದುದ್ದಕ್ಕೂ ಸಭೆಗಳನ್ನು ಸ್ಥಾಪಿಸುವ ಕಾರ್ಯಕ್ಕಾಗಿ ಹಿಂತಿರುಗಿದನು.

## ಎಫೆಸ್ಸ, ಕೊರಿಂಥ ಮತ್ತು ಪೌಲನು

ಪೌಲನು ಅಕ್ವಿಲ್ ಮತ್ತು ಪ್ರಿಸ್ಕಿಲ್ಲೊಂದಿಗೆ ಕೊರಿಂಥವನ್ನು ತೊರೆದನು. ಯೆರೂಸಲೇಮಿನ ಪ್ರಯಾಣದಲ್ಲಿ ಅವನ ಮೊದಲನೆಯ ಗಮ್ಯ ಸ್ಥಾನ ಎಫೆಸ್ಸ. ಬಹುಶಃ ಕೊರಿಂಥದಲ್ಲಿ ತನ್ನ ಸುರಕ್ಷಿತತೆಯ ಗುರುತಾಗಿ ಕೃತಜ್ಞತೆ ಇರಬಹುದು, ಪೌಲನು ನಜರೇತಿನ ಪ್ರತಿಜ್ಞೆಯನ್ನು ತೆಗೆದುಕೊಂಡಿರಬಹುದು (ಅರಣ್ಯಕಾಂಡ 6:2-5). ಅವನ ಕೊರಿಂಥದ ಈಶಾನ್ಯ ಬಂದರಿನ ಸ್ಥಳವಾದ ಕೆಂಖ್ರೆಯನ್ನು ಬಿಡುವಾಗ ಅವನು ತೆಗದುಕೊಂಡ ಪ್ರತಿಜ್ಞೆಯ ಸಮಯ ಮುಗಿದಿತ್ತು. ಅದರ ಪ್ರಕಾರ ಅವನು ಪ್ರಯಾಣವನ್ನು ಪ್ರಾರಂಭಿಸುವದಕ್ಕಿಂತ ಮೊದಲು ಕ್ಷೌರ ಮಾಡಿಸಿಕೊಂಡನು (ಅ.ಕೃ. 18:18). ಎಫೆಸೆಗರು ಆಗಮಿಸಿ, ಅವನು ಪಟ್ಟಣದಲ್ಲಿರುವ ಯೆಹೂದ್ಯ ದೇವಾಲಯದಲ್ಲಿ ಕ್ರಿಸ್ತನನ್ನು ಸಾರಿದನು. ಮತ್ತು ಗಣನೀಯವಾದ ಆಸಕ್ತಿಯನ್ನು ಎಬ್ಬಿಸಿದನು; ಆದರೆ ಅವನು ಯೆರೂಸಲೇಮಿಗೆ ಹೋಗುವ ಅವಸರದಲ್ಲಿದ್ದನು ಅವನು ಸಭೆಯ ಪಂಚಾಶತ್ತಮದ ವಾರ್ಷಿಕೋತ್ಸವದ ಸ್ಥಾಪನೆಗಾಗಿ ಪಟ್ಟಣದಲ್ಲಿ ಇರಲು ಬಯಸಿರಬಹುದು. ಎಫೆಸ್ಸದಲ್ಲಿರುವ ಯೆಹೂದ್ಯರಿಗೆ ತಾನು ತಿರುಗಿ ಬರುತ್ತೇನೆ ಎಂಬ ವಾಗ್ದಾನವನ್ನು ಮಾಡಿ, ಅಪೊಸ್ತಲನು ದಕ್ಷಿಣಕ್ಕೆ ಪ್ರಯಾಣ ಮಾಡಿದನು, ನಂತರ ಪೂರ್ವಕ್ಕೆ ಪ್ರಯಾಣ ಮಾಡಿದನು. ಅಕ್ವಿಲ್ ಮತ್ತು ಪ್ರಿಸ್ಕಿಲ್ ಎಫೆಸ್ಸಿನಲ್ಲಿ ಉಳಿದುಕೊಂಡರು, ವ್ಯಾಪಾರವನ್ನು ಮಾಡಿದನು ಮತ್ತು ಯೇಸು ಕ್ರಿಸ್ತನಾಗಿದ್ದಾನೆ ಎಂಬ ಸಾಕ್ಷಿಯನ್ನು ಹೇಳುವದನ್ನು ಮುಂದುವರೆಸಿದರು.

ಲೂಕನು ಪೌಲನ ಪ್ರಯಾಣದ ತಿಂಗಳುಗಳನ್ನು ದಾಖಲಿಸುತ್ತಾನೆ, ಬಹಳ ಮಟ್ಟಿಗೆ ಒಂದು ವರ್ಷ ಅಥವಾ ಅದಕ್ಕಿಂತ ಹೆಚ್ಚು. ಕೇವಲ ಕೆಲವು ಪದಗಳನ್ನು (ಅ.ಕೃ. 18:22; 19:1). ಅದೇ ಸಮಯದಲ್ಲಿ ಅಪೊಸ್ತಲನು ತನ್ನ ವಾಗ್ದಾನವನ್ನು ನೇರವೇರಿಸಿದನು ಮತ್ತು ಎಫೆಸೆಗೆ ಹಿಂತಿರುಗಿದನು. ಮೂರು ತಿಂಗಳು ಆತನು ದೇವಾಲಯದಲ್ಲಿ ಪ್ರಸಂಗಿಸಿದನು, ಆದರೆ ಇತರ ಪಟ್ಟಣಗಳಲ್ಲಿ ಯೆಹೂದ್ಯರೊಂದಿಗೆ ಆದ ಆತನ ಅನುಭವ ಪುನರಾವರ್ತಿಸಿತು. ದೇವಾಲಯವು ಅವನಿಗಾಗಿ ಮುಚ್ಚಲ್ಪಟ್ಟಾಗ, ಅವನು ತುರನ್ನನ ಆಡಳಿತದಲ್ಲಿದ್ದ ಶಾಲೆಯ ಪ್ರಾಕಾರದಲ್ಲಿ ಆಶ್ರಯವನ್ನು ಪಡೆದುಕೊಂಡನು. ಹಗಲಿನಲ್ಲಿ ತುರನ್ನನ ವಿದ್ಯಾರ್ಥಿಗಳಿಗೆ ಬಿಡುವಿನ ಸಮಯವಿರುವಾಗ, ಪೌಲನು ಅವರಿಗೆ ಕ್ರಿಸ್ತನನ್ನು ಪ್ರಕಟಿಸಿದನು. ಅಲ್ಲಿ ಆತನು

ಎರಡು ವರ್ಷಗಳ ಕಾಲ ಬೋಧಿಸಿದನು. ಎಫೆಸ್ಸೆಯ ಜನರ ಮಧ್ಯದಲ್ಲಿ ಸುವಾರ್ತೆಯು ಬೇರನ್ನು ಮಾತ್ರ ಕಂಡುಕೊಳ್ಳಲಿಲ್ಲ, ಹೊರಗೆ, ಏಶಿಯಾದ ರೋಮನ್ ಪ್ರಾಂತದ ಕ್ಷೇತ್ರದಲ್ಲಿ ಪ್ರಸರಿಸಿತು (ಅ.ಕೃ. 19:10). ಲೂಕನು ಎಫೆಸೆಯಲ್ಲಿದ್ದಾಗ ಸಂಭವಿಸಿದ ಕೆಲವು ಘಟನೆಗಳನ್ನು ಮಾತ್ರ ದಾಖಲಿಸುತ್ತಾನೆ ಆದರೆ ಅವನ ಯಶಸ್ಸಿಗೆ ಬೆನ್ನು ಬಿದ್ದಿರುವ ತೀವ್ರವಾದ ವಿರೋಧವನ್ನು ಪ್ರಕಟಿಸಲು ಇವು ಸಾಕಷ್ಟಾಗಿವೆ.

ಪೌಲನು ಕೊರಿಂಥದ, ಥೆಸಲೋನಿಕ ಮತ್ತು ಗ್ರೀಕ್ ಭಾಷೆಯನ್ನು ಮಾತನಾಡುವ ಇತರ ಪಟ್ಟಣಗಳಲ್ಲಿದ್ದ ತಾನು ಹಿಂದೆ ಬಿಟ್ಟು ಬಂದ ಕ್ರೈಸ್ತರು ತಮ್ಮ ವ್ಯಾಪಾರಿಕೇಂದ್ರ ಸ್ಥಳಗಳಲ್ಲಿ ಕ್ರಮವಾಗಿ ಸಂಚರಿಸುವ ಸಂಚಾರಿ ಬೋಧಕರೊಂದಿಗೆ ಆತನನ್ನು ಹೋಲಿಸಲು ಅಥವಾ ಸರಿಸಮಾನವಾಗಿ ನೋಡುವ ಶೋಧನೆಗೆ ಒಳಗಾಗುತ್ತಾರೆ ಎಂಬುದು ಪೌಲನಿಗೆ ತಿಳಿದಿತ್ತು. ಸಂಚಾರಿ ತತ್ವಜ್ಞಾನಿಗಳು-ಬೋಧಕರು ಮೊದಲನೆಯ ಶತಮಾನದ ಗ್ರೀಕ್ ಮಾತನಾಡುವವರ ಲೋಕದಲ್ಲಿ ಸಾಮಾನ್ಯವಾಗಿದ್ದರು, ಅವರಕ್ಕು ಅನೇಕರು ಉಚ್ಚ ಸ್ವರದವರು, ಅವಲಕ್ಷಣದವರು ಮತ್ತು ಸಾಮಾನ್ಯವಾಗಿ ಕಡೆಗಣಿಸಲ್ಪಟ್ಟವರಾಗಿದ್ದರು. ಅವರು ತಮ್ಮ ವಿಚಾರಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಪ್ರಕಟಿಸುತ್ತಿದರು, ತಮ್ಮ ಸೇವೆಗಾಗಿ ಹಣವನ್ನು ಕೇಳುತ್ತಿದ್ದರು, ಸಾಂಧರ್ಭಿಕವಾಗಿ ಹಿಂಬಾಲಕರನ್ನು ಹೊಂದಿಕೊಳ್ಳುತ್ತಿದ್ದರು ಮತ್ತು ಹೊಸ ಕ್ಷೇತ್ರಗಳಿಗೆ ಚಲಿಸುತ್ತಿದ್ದರು. ಡಯೋ ಕ್ರ್ಯಯಸೋಸ್ಟೋಂ ಪೌಲನಿಗೆ ಹತ್ತಿರದ ಸಮಕಾಲೀನ ಇಸ್ತಮೇನಿಯನ್ ಆಟಗಳ ಸ್ಥಳದಲ್ಲಿ ತಾನು ಸಾಕ್ಷಿಯನ್ನು ನೀಡಿದ ಕುತರ್ಕಿಗಳನ್ನು ಹೀಗೆ ವರ್ಣಿಸುತ್ತಾನೆ:

> ಪೊಸಿಡೋನ'ನ ದೇವಾಲಯದ ಸುತ್ತಲೂ ಜೋರಾಗಿ ಕೂಗುವ ಮತ್ತು ಒಬ್ಬರನ್ನೊಬ್ಬರು ಮತ್ತು ಅವರ ಶಿಷ್ಯರನ್ನು ಬಯ್ಯುತ್ತಾ, ಒಬ್ಬರಿಗೊಬ್ಬರು ಜಗಳ ಮಾಡುತ್ತಾ, ಅನೇಕ ಲೇಖಕರು ತಮ್ಮ ಮೂರ್ಖ ಕೃತಿಗಳನ್ನು ಗಟ್ಟಿಯಾಗಿ ಓದುತ್ತಾ, ಅನೇಕ ಕವಿಗಳು ತಮ್ಮ ಕವಿತೆಗಳನ್ನು ಪಠಣ ಮಾಡುತ್ತಿದ್ದರು ಅದೇ ಸಮಯದಲ್ಲಿ ಇತರರು ಅವರನ್ನು ಸ್ತುತಿಸುತ್ತಿದ್ದರು. ಜನ ಸಮೂಹವು ದುಷ್ಟ ಕುತರ್ಕಿಗಳನ್ನು ಆಲಿಸುವ ಸಮಯವೊಂದಿತ್ತು ಅನೇಕ ಮಂತ್ರಗಾರರು ತಮ್ಮ ತಂತ್ರಗಳನ್ನು ತೋರಿಸುತ್ತಿದ್ದರು, ಭವಿಷ್ಯ ವಾಣಿಯನ್ನು ಹೇಳುವ ಅನೇಕರು ಭವಿಷ್ಯವನ್ನು ಹೇಳುತ್ತಿದ್ದರು, ಅಸಂಖ್ಯಾತ ವಕೀಲರು ನ್ಯಾಯತೀರ್ಪನ್ನು ತಿರುವು ಮರುವು ಮಾಡುತ್ತಿದ್ದರು ಮತ್ತು ಸಣ್ಣ ವ್ಯಾಪಾರ ಮಾಡುವಂತವರು ತಮ್ಮಲ್ಲಿರುವ ಸ್ವಲ್ಪ ವಸ್ತುಗಳನ್ನು ಮಾರಾಟಮಾಡುತ್ತಿದ್ದರು.[15]

ಪೌಲನನ್ನು ಹಿಂದಕ್ಕೆ ಬಿಟ್ಟು ಬಂದ ಕೆಲವು ಕ್ರೈಸ್ತರು ಆತನು ಕ್ರ್ಯಯಸೋಸ್ಟೋಂ ವರ್ಣಿಸುವಂತೆ ಇರಬಹುದೆಂದು ನಿರ್ಧರಿಸಿದ್ದರು. ಅವರು ಆತನನ್ನು ತಿರುಗಿ ಆಲಿಸುವದೇ ಇಲ್ಲ ಎಂದು ನಿರೀಕ್ಷಿಸಿದ್ದರು. ಹಾಗೂ, ಅಲ್ಲಿ ಅವರು ತಪ್ಪು ಮಾಡಿದ್ದರು. ಪೌಲನು ಜನರನ್ನು ಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸುವದಷ್ಟೇ ಅಲ್ಲ, ಅವರನ್ನು ಪೊಷಿಸಿದನು ಮತ್ತು ಈ ಹೊಸ ವಿಶ್ವಾಸಿಗಳಿಗೆ ಬೋಧಿಸಿದನು. ಅವನ ಆಸಕ್ತಿಯು ಅವರು ಕರ್ತನ ಬರೋಣಕ್ಕೆ ಕಾದಿರುವ ಹಾಗೆ ತನ್ನೊಂದಿಗೆ ಪರಿಶುದ್ಧ ಜೀವಿತವನ್ನು ನಡೆಸುವ ಸಭೆಯನ್ನು, ಕ್ರೈಸ್ತ ಸಮುದಾಯವನ್ನು ಕಟ್ಟುವದರಲ್ಲಿತ್ತು. ಎಫೆಸದಲ್ಲಿ ಅಪೊಸ್ತಲರ ಕಾರ್ಯ ಆತನು ಅವರನ್ನು ಕೊರಿಂಥದಲ್ಲಿ ಬಿಟ್ಟು ಬಂದದ್ದರಿಂದ ಅಲ್ಲ. ಎಫೆಸದಲ್ಲಿ ಯಶಸ್ವಿಯಾಗಿರುವ ಮತ್ತು ಬೇಡಿಕೆಯಲ್ಲಿರುವ ಆತನ ಸೇವೆ ಇದ್ದ ಹಾಗೆ ಇರಬೇಕೆಂದು, ಅದಕ್ಕಾಗಿ ಪೌಲನು ಕೊರಿಂಥದಲ್ಲಿರುವ ತನ್ನ ಸ್ನೇಹಿತರ ಮಾಹಿತಿಯನ್ನು ಸಂಗ್ರಹಿಸಿದನು.

ಹೆಚ್ಚು ಜನಸಂಖ್ಯೆ ಇರುವ ಕೇಂದ್ರಗಳಿಂದ ಹಡುಗಿನಲ್ಲಿ ಸಂಚಾರ ಉದಾ. ಕೊರಿಂಥ ಮತ್ತು ಎಫೆಸ ಪ್ಯಾಕ್ಸ್ ರೋಮನಾದಲ್ಲಿ "ರೋಮನ ಸಮಾಧಾನ" ಸಾಮಾನ್ಯವಾಗಿತ್ತು. ಬಹುಶಃ ಆತನ ಪಾದಗಳು ಒಂದು ವ್ಯಾಪಾರಕ್ಕಾಗಿ ಕಾರ್ಯ ಮಾಡುತ್ತಿದ್ದ ನಾವಿಕರು ಅಥವಾ ವ್ಯಾಪಾರಿಗಳ ಮಾರ್ಗವನ್ನು ಆತನು ದಾಟಿರಬಹುದು ಚೋಲೆ ಎಂಬ ಹೆಸರಿನ ಒಬ್ಬ ಸ್ತ್ರೀ. ಆತನು ಅವರನ್ನು "ಖ್ಲೋಯೆಯ ಜನರ" ಎಂದು ಕರೆಯುತ್ತಿದ್ದನು. ಬಹಳ ಮಟ್ಟಿಗೆ ಆತನು ಮತ್ತು ಖ್ಲೋಯೆಯು ತಾನೆ ತಮ್ಮನ್ನು ಕೊರಿಂಥದಲ್ಲಿರುವ ಕ್ರೈಸ್ತ ಸಮುದಾಯದಲ್ಲಿ ಎಣಿಕೆ ಮಾಡಿರಬಹುದು.

ಅವರು ಪೌಲನಿಗೆ ಒದಗಿಸುವ ಸಮಾಚಾರವು ಅವರು ಅಥವಾ ಅವರ ಮಾಹಿತಿದಾರರು ಕೊರಿಂಥದಲ್ಲಿರುವ ಸಭೆಯ ಸಮುದಾಯ ಜೀವಿತದಲ್ಲಿ ವ್ಯಕ್ತಿಗತ ಹಂತದಲ್ಲಿ ತೊಡಗಿಸಿಕೊಂಡಿದ್ದಾರೆಂದು ಸಲಹೆ ನೀಡುತ್ತಿದ್ದರು. ಪೌಲನು ಖ್ಲೋಯಯು ಜನರಿಂದ ಹೊಂದಿಕೊಂಡ ಸಮಾಚಾರವು ಅವರ ಮೇಲಿರುವ ಕಳಕಳಿಯಿಂದಾಗಿ. ಮರಿ ಸಭೆಗಳು ವಿಭಾಗದ ಗೆರೆಗಳನ್ನು ಎಳೆಯುತ್ತಿದ್ದವು. ಅಪೊಲ್ಲೋಸ, ಪ್ರತಿಭಾನ್ವಿತ ಮತ್ತು ಸುಶಿಕ್ಷಿತ (ಅ.ಕೃ. 18:24), ಕೊರಿಂಥದಲ್ಲಿರುವ ಸಭೆಯೊಂದಿಗೆ ಸ್ವಲ್ಪ ಸಮಯವನ್ನು ಕಳೆದನು. ಅವನು ಪೌಲನೊಂದಿಗೆ ಹರಿತವಾಗಿ ವಾದ ಮಾಡಿದನು. ಪೌಲನು ಮನುಷ್ಯರು ಯಾವುದನ್ನು ಜ್ಞಾನವೆಂದು ತಿಳಿದಿದ್ದಾರೋ ಅದನ್ನು ಕಡಿಮೆ ಮಾಡಿದನು (1 ಕೊರಿಂಥ 2:1, 2) ಆತನ ವಯಕ್ತಿಕ ರೂಪ ಮತ್ತು ಪದಗಳನ್ನು ಹೇಳುವದರಲ್ಲಿ ಶೀಘ್ರತೆ ಬಹಳ ಪ್ರಭಾವವನ್ನು ಬೀರಲಿಲ್ಲ (2 ಕೊರಿಂಥ 10:10). ಕೊರಿಂಥದಲ್ಲಿರುವ ಕ್ರೈಸ್ತರು ಬೇಗನೆ ಬದಿಗೆ ಸರಿದರು. ಕೆಲವರು ಅಪೊಲ್ಲೋಸನ ನಾಯಕತ್ವವನ್ನು ನೋಡಿದರು; ಇತರರು ಪೌಲನಿಗೇ ಅಪ್ಪಿಕೊಂಡರು. ಪೌಲನು ಅಲ್ಗೆಝೂಂಡರ್ರಿಯಾದಿಂದ ಎಫೆಸೆಗೆ ಮತು ಎಫೆಸೆಯಿಂದ ಕೊರಿಂಥಕ್ಕೆ ಯಾವ ಸ್ವಾತಂತ್ರದಿಂದ ಪ್ರಯಾಣ ಮಾಡಿದನೋ ದು ಅವನು ಸ್ವಲ್ಪ ಸಂಪತ್ತು ಹೊಂದಿರುವ ಮನುಷ್ಯನೆಂದು ತೋರಿಸುತ್ತದೆ. ಪ್ರಯಾಣ ವೆಚ್ಚದಾಯಕವಾಗಿತ್ತು. ಆತನ ಶಿಕ್ಷಣ ಮತ್ತು ಸೂಕ್ಷ್ಮ ಪರಿಜ್ಞಾನ ಕೊರಿಥದಲ್ಲಿರುವ ಕೆಲವರ ಮೇಲೆ ಪ್ರಭಾವ ಬೀರಿತು. ಜ್ಞಾನ, ತತ್ವಜ್ಞಾನ ಮತ್ತು ಸೂಕ್ಷ್ಮ ಪರಿಜ್ಞಾನ ಕೊರಿಂಥದ ಶ್ರೀಮಂತರಲ್ಲಿ ಒಂದು ಸಂಪ್ರದಾಯವಾಗಿತ್ತು. ಅಪೊಲ್ಲೋಸ ವಿಶ್ವಾಸಿಗಳಿಗೆ ಪ್ರಭಾವಿಯಾಗಿದ್ದನು. ಅವನು ಏನನ್ನು ಆಲಿಸಿದ್ದನೋ ಅದರಿಂದಾಗಿ ಪೌಲನು ನಂಬಿಗಸ್ತರಿಂದ ತನ್ನ ಮತ್ತು ಅಪೊಲ್ಲೋಸ್‌ನ ಸುತ್ತಲೂ ರಚಿಸುತ್ತಿರುವ ವಿಭಾಗ ಅವರ ನಿಯಂತ್ರಣಕ್ಕೆ ಮೀರಿದ್ದಾಗಿತ್ತು. ಯಾಕೆ ತನ್ನ ಬೋಧನೆಯು ಅಪೊಲ್ಲೋಸನ ಬೋಧನೆಗಿಂತ ಮೂಲ ಹಂತದ್ದಾಗಿದೆ ಎಂಬುದನ್ನು ವಿವರಿಸುವದು ಆತನಿಗೆ ಅವಶ್ಯವಾಗಿತ್ತು (1 ಕೊರಿಂಥ 3:1-3). ಅದೇ ಸಮಯದಲ್ಲಿ, ಅವನು ಸಭೆಯು ತಾನು ಮತ್ತು ಅಪೊಲ್ಲೋಸನು ಕ್ರಿಸ್ತನಿಗಾಗಿ, ಆತನ ದೇಹವೆಂಬ ಸಭೆಗಾಗಿ ಹಿನ್ನೆಲೆಯಲ್ಲಿ ನಿಲ್ಲುವದಕ್ಕೂ ಸಿದ್ಧರಾಗಿದ್ದೇವೆ ಎಂಬುದನ್ನು ಸಭೆ ತಿಳಿದುಕೊಳ್ಳಬೇಕೆಂದು ಬಯಸಿದ್ದನು (3:5, 6). ಅವನ ವಿಚಾರದಲ್ಲಿ, ಅಪೊಲ್ಲೋಸನು ವಿಭಾಗವಾಗುವದಕ್ಕೆ ಕೊಡುಗೆಯನ್ನು ನೀಡುವನೋ ಎಂಬ ಭಯದಲ್ಲಿ ಪಟ್ಟಣವನ್ನು ಬಿಟ್ಟು ಹೋಗಿದ್ದಾನೆ ಮತ್ತು ಮತ್ತೆ ಬೆಟ್ಟೆ ನೀಡಲು ನಿರಾಕರಿಸಿದ್ದಾನೆ ಎಂದಾಗಿತ್ತು (16:12). ಪೌಲನು ಕಾರ್ಯತತ್ಪರನಾಗುವ ಅವಶ್ಯಕತೆಯನ್ನು ಕಂಡನು. ಸಭೆಯಲ್ಲಿ ವಿಭಾಗ, ತತ್ವಜ್ಞಾನವನ್ನು ಕಲಿಯುವದಕ್ಕೆ ಹೆಚ್ಚು ಒತ್ತು ನೀಡುವದರಿಂದಾಗಿ, ಇದು ಆತನಿಗೆ ಬರಿಯಲಿಕ್ಕೆ

ಒತ್ತಾಯಪಡಿಸಿತು.

ಪೌಲನು ತಾನು ಬರೆಯಬೇಕಾಗಿರುವ ಪತ್ರಗಳನ್ನು ಪರಿಗಣಿಸುತ್ತಿರುವಾಗ ಅಥವಾ ಬಹಳ ಮಟ್ಟಿಗೆ ಅವನು ಬರೆಯುವದಕ್ಕೆ ಪ್ರಾರಂಭಿಸಿದ ನಂತರ, ಹೊಸ ಬೆಳವಣಿಗೆ ಕಾರ್ಯಕ್ಕೆ ಹುರುಪನ್ನು ನೀಡಿತು. ಊರ ಮನುಷ್ಯರು ಆಗಮಿಸಿದರು, ಕೋರಿಂಥದ ಸ್ನೇಹಿತರು. ಅವರಲ್ಲಿ ಒಬ್ಬನು ಸ್ತೇಫನನು, ಅವನು ಆಖಾಯಾದಲ್ಲಿ ಮೊದಲನೆಯನದಾಗಿ ಮತಾತಂರ ಹೊಂದಿದವರಲ್ಲಿ ಒಬ್ಬನು (16:15-17). ಮೂರು ಜನ ಆಗಂತುಕರ ಹೆಸರು ಅವರ ಕುರಿತಾಗಿ ಸ್ವಲ್ಪ ಮಟ್ಟಿಗೆ ಹೇಳುತ್ತದೆ. ಸ್ತೇಫನನ್ನು ಅವನ ಮನೆವಾರ್ತೆಯೊಂದಿಗೆ ಉಲ್ಲೇಖಿಸಿರುವದರಿಂದ ಮತ್ತು ಪೌಲನು ಸಭೆ ಆತನಿಗೆ ಮತ್ತು ಆತನಂಥವರಿಗೆ ಅಧೀನವಾಗಿಬೇಕು ಎಂದು ಬೇಡಿಕೊಂಡದ್ದರಿಂದ, ಸ್ತೇಫನನು ಪರಿಣಾಮಕಾರಿಯಾದ ಪ್ರಭಾವವನ್ನು ಸಭೆಯ ಮೇಲೆ ಬೀರಿದ್ದನೆಂದು ಹೇಳುವದು ಸಮಂಜಸವಾಗಿದೆ. ಅವನು ಕೆಲವು ಸ್ಥಾನಮಾನಗಳನ್ನು ಹೊಂದಿರುವ ಮತ್ತು ಹಣಕಾಸಿನ ಸೌಲಭ್ಯವನ್ನು ಹೊಂದಿರುವ ಮನುಷ್ಯನಾಗಿದ್ದನು. ಅವನ ಹೆಸರು ಗ್ರೀಕ್‌ರಲ್ಲಿ ಸಾಮಾನ್ಯವಾಗಿತ್ತು. ಇಂಗ್ಲೀಷ ಹೆಸರು "ಸ್ತೆಫನ" ಮತ್ತು "ಸ್ತೆಫನಿಯ" ಇದು ಗ್ರೀಕ್ στέφανος (*stephanos*) ಪದದಿಂದ ತೆಗೆದುಕೊಳ್ಳಲಾಗಿದೆ, ಇದು ಆಟಗಳಲ್ಲಿ ನೀಡಿವ ಬಹುಮಾನಗಳಂತೆ ಜಯವೀರನ ಹಾಗೆ ಎಂದರ್ಥ.

ಸ್ತೇಫನನೊಟ್ಟಿಗೆ ಸಂಚರಿಸುತ್ತಿದ್ದ ಇನ್ನಿಬ್ಬರು ಸಂಗಾತಿಗಳು ಹೆಸರುಗಳು ಸಾಮಾನ್ಯವಾಗಿ ಗುಲಾಮರು ಇಟ್ಟುಕೊಳ್ಳುತ್ತಿದ್ದ ಹೆಸರುಗಳು. "ಫಾರಚೂನಸ್ಸ" ಅರ್ಥ "ಅದೃಷ್ಟವಂತ" ಆತನು ಇಂಥಹ ಹೆಸರನ್ನು ಇಟ್ಟುಕೊಳ್ಳುವದರ ಹಿಂದೆ ಒಂದು ಧೀರ್ಘವಾದ ಕಥೆಯಿದೆ "ಅಖಾಯಿಕಸ್ಸ" ಎಂದರೆ "ಆಖಾಯದವನು" ಎಂದರ್ಥ. ಅಖಾಯವು ಕೊರಿಂಥ ನೆಲೆಗೊಂಡಿರುವ ಸ್ಥಳದಲ್ಲಿದ್ದ ಪ್ರಾಂತ್ಯ. ಈ ಇಬ್ಬರು ಮನುಷ್ಯರು ಫಾರಚೂನಸ್ಸ ಮತ್ತು ಆಖಾಯಿಕಸ್ಸ ಸ್ತೇಫನನಿಗೆ ಸಂಬಂಧಿಸಿದ ಗುಲಾಮರಾಗಿರಬಹುದು. ಪೌಲನು ಯಾವುದೇ ಭೇದಭಾವವಿಲ್ಲದೆ ಯಜಮಾನರನ್ನು ಮತ್ತು ಗುಲಾಮರನ್ನು ಇಬ್ಬರನ್ನೂ ಕ್ರಿಸ್ತನ ಬಳಿಗೆ ನಡೆಸಿದನು, ಅವರ ರೂಪಾಂತರ ಅವರ ಸ್ಥಾನಕ್ಕೆ ದಕ್ಕೆತಂದಿರಬಹುದು (ಕೊಲಸ್ಸೆ 3:22; 4:1).

ಮೂರು ಜನ ಆಗಂತುಕರು ಪೌಲನಿಗೆ ಅದರ ವಿಭಾಗವಾದಲ್ಲಿರುವ ಸಭೆಯ ಸ್ಥಿತಿಯ ಕುರಿತಾಗಿ ಅವನ ಊಹಿಸಿದನ್ನು ಖಚಿತಪಡಿಸಲು ಹೆಚ್ಚಿನ ಮಾಹಿತಿಯನ್ನು ಒದಗಿಸುವದು ಮಾತ್ರವಲ್ಲ, ಅವರು ಸಹೋದರರಿಂದ ಪತ್ರವನ್ನು ಸಹ ತಂದಿದ್ದರು. ಅವರ ಪತ್ರದಲ್ಲಿ ಕೊರಿಂಥದಲ್ಲಿರುವ ಕ್ರೈಸ್ತರು ಪೌಲನಿಗೆ ಪ್ರಶ್ನೆಗಳನ್ನು ಕೇಳಿದ್ದರು. ಕೆಲವು ಜಟಿಲ ವಿಷಯಗಳನ್ನು ಹೇಗೆ ನಿರ್ವಹಿಸಬೇಕು ಎಂಬುದರ ಕುರಿತಾಗಿ ಅವರಿಗೆ ಖಚಿತವಾಗಿರಲಿಲ್ಲ. ಕೊರಿಂಥದಲ್ಲಿರುವ ಸಭೆಗಳಿಗೆ ಬರೆಯುವ ಪೌಲನ ಯೋಜನೆ ಹೊಸ ತ್ವರಿತತೆ ಮತ್ತು ಮಾರ್ಗದರ್ಶನವನ್ನು ತೆಗೆದುಕೊಂಡಿತು. ಅವನ ಪತ್ರದ ಸಮಯದಲ್ಲಿ ಅವರು ಬರೆದ ಒಂದು ಪತ್ರವನ್ನು ಆತನು ಹೀಗೆ ಉಲ್ಲೇಖಿಸಿ (1 ಕೊರಿಂಥ 7:1) ಅವರನ್ನು ಅವರ ಪ್ರಶ್ನೆಗಳನ್ನು ಸಂಬೋಧಿಸಿದನು, "ಇದರ ಕುರಿತಾಗಿ" ಎಂಬ ಸೂತ್ರದೊಂದಿಗೆ ಪ್ರತಿಯೊಂದನ್ನು ಪರಿಚಯಿಸಿದನು (7:1; 8:1; 12:1; 16:1).

ಪೌಲನು ಕೊರಿಂಥಕ್ಕೆ ಆಗಮಿಸುವ ಪೂರ್ವದಲ್ಲಿ, ಪಟ್ಟಣದ ಮತ್ತು ಅದರ ಜನರ

ಕುರಿತಾದ ಕಥೆಗಳು, ದಂತಕಥೆಗಳು, ಪುರಾಣಕಥೆಗಳು ಮತ್ತು ಕಲ್ಪನಾ ಕಥೆಗಳು ಗ್ರೀಕೋರೋಮನ್ ಲೋಕದ ಎಲ್ಲಾ ಭಾಗಗಳಿಗೆ ಸಂಚರಿಸಿದ್ದವು. ವ್ಯಾಪಾರಕ್ಕಾಗಿ ಯುರೋಪ ಮತ್ತು ಏಶಿಯಾಕ್ಕೆ ಹೊಂದಿಕೊಂಡಿರುವ ಇಸ್ತಮಸ್ ವಿಶಿಷ್ಟವಾದ ಸ್ಥಾನವಾಗಿರಲಿಲ್ಲ. ಸೀಜರ್‌ನಂತೆ ಅವನ ಪೂರ್ವದಲ್ಲಿ, ಪೌಲನು ಕೊರಿಂಥದಲ್ಲಿರುವ ಸಾಮರ್ಥ್ಯವನ್ನು ಗಾಲಿಯ ಮಧ್ಯಭಾಗದಂತೆ ಎಂದು ಗುರುತಿಸಿರಬಹುದು. ಸೀಜರ್ ರೋಮನ್ ಅಧಿಕಾರವನ್ನು ಹುಡುಕಿದನು; ಪೌಲನು ಕ್ರಿಸ್ತನ ಸುವಾರ್ತೆಯನ್ನು ಪ್ರಸರಿಸುವದರಲ್ಲಿ ಆಸಕ್ತಿವಹಿಸಿದನು.

## ಅನುಕ್ರಮಣಿಕೆ ಮತ್ತು ರೂಪರೇಖೆ

ಇದರೊಟ್ಟಿಗೆ ಒಂದು ಚಿಕ್ಕ ಪರಿಚಯ ಮತ್ತು ಉಪಸಂಹಾರ, ಪೌಲನು ಕೊರಿಂಥದವರಿಗೆ ಬರೆದ ಮೊದಲನೆಯ ಪತ್ರ ಎರಡು ಮುಖ್ಯ ಭಾಗಗಳನ್ನೊಳಗೊಂಡಿದೆ: ಗಮನ ಮತ್ತು ತಿದ್ದುವಡಿಯ ಅವಶ್ಯಕತೆಯಿರುವ ಸಭೆಗಳ ಬೆಳವಣಿಗೆ (ಅಧ್ಯಾಯ 1-6) ಮತ್ತು ಸಭೆಯು ಪೌಲನಿಗೆ ಕೇಳಿದ ಪ್ರಶ್ನೆಗಳಿಗೆ ಪ್ರತ್ಯುತ್ತರಗಳು (ಅಧ್ಯಾಯ 7-16). ಯಾಕೆಂದರೆ ಪೌಲನು ಕೊರಿಂಥದಲ್ಲಿರುವ ಸಭೆಗಳಿಗೆ ಬರೆಯುತ್ತಿದ್ದಾನೆ, ಲೋಕವು ಬದಲಾಗಿದೆ, ಪ್ರವಿತ್ರ ವಾಕ್ಯವು ಸ್ಥಾನಿಕ ಮಟ್ಟದಲ್ಲಿ ಅನ್ವಯಿಸುವಿಕೆಯನ್ನು ನೀಡಿದೆ ಮತ್ತು ಸಭೆ ಒಟ್ಟಾರೆ ಬಲಗೊಂಡಿದೆ. ಅಪೊಸ್ತಲನ ಅತ್ಯಂತ ಧೀರ್ಘವಾದ ಮತ್ತು ಹೆಚ್ಚು ಪ್ರಭಾಶಾಲಿಯಾದ ಪೌಲನ ಪತ್ರಗಳೆಂದರೆ ರೋಮಾಪುರದವರಿಗೆ ಬರೆದ ಪತ್ರ ಮತ್ತು 1 ಕೊರಿಂಥದವರಿಗೆ ಬರೆದ ಪತ್ರ. ಎರಡೂ ಅನುಕ್ರಮಣಿಕೆಯಲ್ಲಿ ಗಮನೀಯವಾಗಿ ವಿಭಿನ್ನವಾಗಿವೆ. 1 ಕೊರಿಂಥದವರಿಗೆ ಬರೆದ ಪತ್ರ ಸಭೆ ಕ್ರಿಸ್ತನನ್ನು ಅರಿತುಕೊಳ್ಳಲು ಹೋರಾಟ ಮಾಡುತ್ತಿರುವ ಪ್ರಾಯೋಗಿಕ ವಿಷಯಗಳನ್ನು ನಿರ್ವಹಿಸುತ್ತದೆ. ಹಲವು ಐವತ್ತು ವರ್ಷಗಳ ಹಿಂದೆ ಸಿಕೆ. ಬ್ಯಾರೆಟ್ ಎರಡು ದಾಖಲೆಗಳಿಗೆ ಇರುವ ಅಗ್ಯತೆಯ ಕುರಿತಾಗಿ ಸಾಕ್ಷೀಕರಿಸಿದರು:

> ನಮ್ಮ ಸಂತತಿಯಲ್ಲಿರುವ ಸಭೆ ಅಪೊಸ್ತಲರ ಸುವಾರ್ತೆಯನ್ನು ಮರುಸಂಶೋಧಿಸುವ ಅವಶ್ಯಕತೆಯಿದೆ ಎಂದು ನನಗೆ ತೋರಿಬರುತ್ತದೆ; ಮತ್ತು ಇದಕ್ಕಾಗಿ ಅದಕ್ಕೆ ರೋಮಾಪುರದವರಿಗೆ ಬರೆದ ಪತ್ರದ ಅವಶ್ಯಕತೆಯಿದೆ. ಅದಕ್ಕೆ ಈ ಸುವಾರ್ತೆಗಳ ಮಧ್ಯದಲ್ಲಿರುವ ಸಂಬಂಧವನ್ನು ಮತ್ತು ಅದರ ಕ್ರಮವನ್ನು, ಶಿಸ್ತನ್ನು, ಆರಾಧನೆಯನ್ನು ಮತ್ತು ನೈತಿಕತೆಯನ್ನು ಮರು ಸಂಶೋಧಿಸುವ ಅವಶ್ಯಕತೆಯಿದೆ; ಮತ್ತು ಅದಕ್ಕಾಗಿ ಇದಕ್ಕೆ ಕೊರಿಂಥದವರಿಗೆ ಬರೆದ ಪತ್ರದ ಅವಶ್ಯಕತೆಯಿದೆ.[16]

ಬ್ಯಾರೆಟ್ ಅವರು ಈ ಮಾತುಗಳನ್ನು ಬರೆದು ಕೆಲವು ಶತಮಾನಗಳು ಸಂದುಹೋದವು ಆದರೆ ಅವು ಆತನ ಸಮಯಕ್ಕೆ ಎಷ್ಟು ಸಮಂಜಸವಾಗಿದ್ದವೋ ಪ್ರಸ್ತುತ ಲೋಕಕ್ಕೂ ಅಷ್ಟೇ ಸಮಂಜಸವಾಗಿವೆ.

ಪೌಲನು ಕೊರಿಂಥದವರಿಗೆ ಬರೆದ ಮೊದಲನೆಯ ಪತ್ರಕ್ಕೆ ಇಲ್ಲಿ ಸಂಕ್ಷಿಪ್ತ ಮುಖ್ಯಾಂಶಗಳು:

ಪರಿಚಯ: ಪೌಲನಿಂದ ಮತ್ತು ಸೊಸ್ಥೆನನಿಂದ ಶುಭಾಶಯಗಳು (1: 1-3).

I. ಗಮನ ಮತ್ತು ತಿದ್ದುಪಡಿಯ ಅವಶ್ಯಕತೆಯಿರುವ ಸಭೆಯಲ್ಲಿರುವ ಸಮಸ್ಯೆಗಳು (1:4-6:20)
   A. ಜ್ಞಾನ ಮತ್ತು ಪಂಥಗಳ ಕಲಹ ಅಸಮಂಜಸ (1:4-4:21)
   B. ನೈತಿಕ ಸಮಗ್ರತೆಗೆ ಕ್ರಿಸ್ತನ ಬೇಡಿಕೆಗಳು (5:1-6:20)

II. ಪ್ರಶ್ನೆಗಳಿಗೆ ಸಭೆಯಿಂದ ಉತ್ತರಗಳು (7:1-16:18)
   A. ವಿವಾಹದ ಕುರಿತು ಪ್ರಶ್ನೆಗಳು (7:1-40)
   B. ವಿಗ್ರಹಾರಾಧನೆ ಮತ್ತು ಇತರ ವಿಷಯಗಳ ಕುರಿತು ಪ್ರಶ್ನೆಗಳು (8:1-11:34)
   C. ಆತ್ಮೀಕ ವರಗಳ ಕುರಿತು ಪ್ರಶ್ನೆಗಳು (12:1-14:40)
   D. ಸತ್ತವರ ಪುನರುತ್ಥಾನದ ಕುರಿತು ಪ್ರಶ್ನೆಗಳು (15:1-58)
   E. ಕೊನೆಯ ಸಂಗತಿಗಳು (16:1-18)

ಉಪಸಂಹಾರ (16:19-24)

# ಅನ್ವಯಿಸುವಿಕೆಗಳು

## ಅನೈತಿಕತೆ ಮತ್ತು ಜೀವಿತವನ್ನು ಉಪೇಕ್ಷಿಸುವದು

ಎಫ್ರೋದೇತ ಪ್ರೀತಿಯ ದೇವತೆ, ಆದರೆ ಅವಳು ಶಿಶುಜನನ ಮತ್ತು ಕುಟುಂಬಗಳ ದೇವರಲ್ಲ. ಗ್ರೀಕ್‌ರು ಹೀರಾ, ಜೆಸ್ಸುವಿನ ಹೆಂಡತಿಯನ್ನು ಅಥವಾ ಅರ್ತೇಮಿಯಳನ್ನು ಶಿಶುವಿನ ಜನನದ ಸಮಯದಲ್ಲಿ ಸುರಕ್ಷಿತತೆಗಾಗಿ ಮತ್ತು ಹೆಸ್ತಿಯಾ, ಆರೋಗ್ಯದ ದೇವತೆ, ಕುಟುಂಬದ ವಿಷಯಗಳಿಗಾಗಿ ದೃಷ್ಟಿಸುತ್ತಿದ್ದರು. ಎಫ್ರೋದೇತಳಿಗೆ, ಇಂದ್ರಿಯ ಸುಖದಲ್ಲಿ ತೃಪ್ತಿಪಡಲು ಮಕ್ಕಳು ತೊಂದರೆ ಕೊಡುವಂತ ಉತ್ಪಾದನೆಯಾಗಿದ್ದವು. ಬಹುಶಃ ಎಲ್ಲಿಯೂ ವೇಶ್ಯೆಯರು ಮಕ್ಕಳನ್ನು ಗರ್ಭಪಾತ ಮಾಡಿಸಿಕೊಂಡರು ಎಂಬುದನ್ನು ಕೇಳಿಲ್ಲ, ಅನೇಕಾವರ್ತಿ ಈ ಪ್ರಕ್ರಿಯೆಯಲ್ಲಿ ಸತ್ತು ಹೋಗುವದು ಅಥವಾ ಮಗುವನ್ನು ಪರ್ವತ ಪ್ರದೇಶಗಳಲ್ಲಿ ತೊರೆದು ಬಿಡುವದು ಎಂಬುದನ್ನು ಕೇಳಿಲ್ಲ ಎಫ್ರೋದೇತಳ ಪುರಾಣ ಕಥೆ ಪ್ರಕಟವಾಗುವ ಅನೈತಿಕತೆಯೊಂದಿಗೆ ಸಂಬಂಧ ಮತ್ತು ತುಚ್ಛ ಮಾನವ ಜೀವಿತವನ್ನು ಪ್ರದರ್ಶಿಸುತ್ತದೆ. ಎರಡೂ ಒಟ್ಟಾಗಿ ಹೋಗುತ್ತವೆ. ಗ್ರೀಕ್‌ರ ಪುರಾಣ ಕಥೆಗಳಲ್ಲಿ, ಎಫ್ರೋದೇತಳು ಹೆಫಾಸಟುಸ್‌ನ ಹೆಂಡತಿ ಎಂದು ಹೇಳುತ್ತದೆ, ಜೆಸ್ ಮತ್ತು ಹೀರಾನ ವಿದೂಷಕ ಮಗ, ಹೆಳವ ಮತ್ತು ದೇವರ ಶಿಲ್ಪಿ. ಹ್ಯಾಗೂ, ಹೆಚ್ಚಿನ ಸಮಯ, ಎರೆಸ್‌ನ ಸಂಗಾತಿಯಾಗಲು ಪದವಿಯನ್ನು ಹೊಂದಿದಳು. ಎರೆಸ್‌ನ ರೋಮನ ಪ್ರತಿರೂಪ ಮಾರಸ್ ಆಗಿದ್ದನು, ಆದರೆ ಮಾರಸ್‌ನು ವಿಮೋಚಿಸುವ ಕೆಲವು ಗುಣಲಕ್ಷಣಗಳನ್ನು ಹೊಂದಿದ್ದನು. ವ್ಯವಸಾಯದ ಉದ್ದೇಶ ಅವನ ಜೊತೆಯಾಗಿದ್ದವು. ಗ್ರೀಕ್ ದೇವರಾದ ಎರೆಸ್‌ನು ಕೇವಲ ರಕ್ತದೊಂದಿಗೆ ಸಂಬಂಧ ಹೊಂದಿದ್ದನು, ಹೆಪ್ಪುಗಟ್ಟಿದ ರಕ್ತ ಮತ್ತು ಮರಣ. ಪೌಲನ ಸಮಯದಲ್ಲಿದ್ದ ಕಲಾಕೃತಿಗಳು ಎಫ್ರೋದೇತ, ಇಂದ್ರಿಯಸುಖದ ದೇವತೆ, ಎರೆಸ್‌ನೊಂದಿಗೆ ಕೈಗಳಲ್ಲಿ ಕೈ ಹಾಕಿರುವದನ್ನು ಪ್ರದರ್ಶಿಸುತ್ತವೆ, ಯುದ್ಧ ರಂಗದಲ್ಲಿ ತುಂಡುತುಂಡಾಗಿ ಹರಡಲ್ಪಟ್ಟ ದೇಹಗಳ ದೇವತೆ. ಎಫ್ರೋದೇತನ ಸಹವಾಸ ಮತ್ತು ಎರೆಸ್ ಮಾನವ ಜೀವಿತದ ಕತ್ತಲೆಯ ಭಾಗವನ್ನು ಪ್ರದರ್ಶಿಸುತ್ತವೆ. ಜನರು ಲೈಂಗೀಕ ಆನಂದವನ್ನು ಸಮರ್ಪಣೆ, ಕುಟುಂಬ ಮತ್ತು ಮನೆಗಳಿಂದ ವಿಚ್ಛೇದಿಸಿದಾಗ ಜೀವಿತವು ಅಗ್ಗವಾಗಿದೆ.

ಒಬ್ಬರು ಎಫ್ರೋದೇತ ಮತ್ತು ಎರಸ್‌ರ ಮಧ್ಯದಲ್ಲಿರುವ ಸಂಬಂಧವನ್ನು ಆಕಸ್ಮಿಕವಾಗಿ ತೊರೆದುಬಿಡಬಹುದು ಒಂದುವೇಳೆ ಜೀವಿತದ ಉಗ್ರವಾದ ಉಪೇಕ್ಷೆ ಲೈಂಗಿಕತೆಯ ನಿರ್ಭದಂತೆಯ ಕೊರತೆಯೊಂದಿಗೆ ಸೇರಿಕೊಂಡರೆ ಅಲ್ಲಿ ಹೆಚ್ಚಿನ ಸಹವಾಸ ಇರುವದಿಲ್ಲ. ಹಳೆ ಒಡಂಬಡಿಕೆಯಲ್ಲಿ ಸಂಧಿಸಿದ ಫಲದಾಯಕತೆಯ ದೇವರುಗಳು ಎರಡು ಅಭ್ಯಾಸಗಳ ಲಕ್ಷಣಗಳನ್ನು ಹೊಂದಿರುತ್ತವೆ ಅದು ಇಸ್ರಾಯೇಲರ ದೇವರಿಗೆ ವಿರೋಧವಾಗಿದೆ. ಮೊದಲನೆಯದು ಪವಿತ್ರ ವೇಶ್ಯಾವೃತ್ತಿ. ". . . ಹೀಗಿರಲು ನನ್ನ ಜನರೇ ನಿಮ್ಮ ಕುಮಾರಿಯರು ಸೂಳೆಯರಾಗಿ ನಡೆಯುವದು ನಿಮ್ಮ ವಧುಗಳು ವ್ಯಭಿಚಾರ ಮಾಡುವದೂ ಏನಾಶ್ಚರ್ಯ?" ಎಂದು ಹೋಶೇಯನು ಪ್ರಕಟಿಸುತ್ತಾನೆ (ಹೋಶೇಯ 4:13). "ನೀನು ನಿನ್ನ ದೇವರನ್ನು ಬಿಟ್ಟು ಸೂಳೆತನ ನಡೆಸಿದ್ದೀ; ಎಲ್ಲಾ ಕಣಗಳಲ್ಲಿನ ಫಲವನ್ನೂ ಅದರ ಪ್ರಫಲವನ್ನಾಗಿ ಆಶಿಸಿದ್ದೀ" ಎಂದು ಆತನು ಸೇರಿಸುತ್ತಾನೆ (ಹೋಶೇಯ 9:1). ದೇವರಿಗೆ ಜಿಗುಪ್ಸೆಯನ್ನು ತಂದ ಕಾನಾನ್ಯರ ಧರ್ಮದ ಎರಡನೇಯ ಗುಣಲಕ್ಷಣ ಮನುಷ್ಯ ಬಲಿ.

ಯೆರಮೀಯನು “ತಮ್ಮ ಗಂಡು ಹೆಣ್ಣು ಮಕ್ಕಳನ್ನು ಆಹಿತಿ ಕೊಡುವದಕ್ಕೆ ಬೆನ್‌ಹಿನೋಮ್ ತಗ್ಗಿನಲ್ಲಿಮ ಶೋಫೆತ ಎಂಬ ಪೂಜಾ ಸ್ಥಳವನ್ನು ಕಟ್ಟಿದ್ದಾರೆ (ಯೆರೆ. 7:31) ಎಂದು ಪ್ರಸಂಗಿಸುತ್ತಾನೆ. ಕಾನಾನಿನ ವಿಗ್ರಹಾರಾಧನೆ ಲೈಂಗೀಕ ಆರಾಧನೆಯ ವಾಸ್ತವಿಕ ಗುಣಲಕ್ಷಣವನ್ನು ತೋರಿಸುತ್ತದೆ. ಅನೀರಿಕ್ಷಿತವಾಗಿ ಅಲ್ಲ, ಇದು ಸ್ಥಳದಲ್ಲಿರುವ ಮಕ್ಕಳನ್ನು ಮೋಲೆಕನಿಗೆ ಬಲಿ ಅರ್ಪಿಸುವ ಗುಣಲಕ್ಷಣವನ್ನು ಸಹ ತೋರಿಸುತ್ತದೆ.

ಆಧುನಿಕ ಲೋಕದಲ್ಲಿ, ಸಹ, ಲೈಂಗಿಕ ಸ್ವಾತಂತ್ರ್ಯ ಮದುವೆಯಿಲ್ಲದೇ ಜೊತೆಯಲ್ಲಿರುವ ದಂಪತಿಗಳ, ಸರಳವಾಗಿ ವಿಚ್ಛೇದನ ಮತ್ತು ಅಭಿವೃದ್ಧಿ ಹೊಂದುತ್ತಿರುವ ಅಶ್ಲೀಲ ಸಾಹಿತ್ಯದ ವೈಶಿಷ್ಟ ಇವೆಲ್ಲವೂ ಸೇರಿ ಜೀವಿತವನ್ನು ಉಪೇಕ್ಷಿಸುವಂತೆ ಮಾಡುತ್ತವೆ. ಗರ್ಭಪಾತವು ಒಂದು ಮಾನವ ಹಕ್ಕಾಗಿ ಕಾಪಾಡಿಕೊಳ್ಳಲಾಗುತ್ತಿದೆ. ಪ್ರಾಚೀನ ಲೋಕದಲ್ಲಿ, ಶಿಶುಹತ್ಯ ಇಂದಿನ ಗರ್ಭಪಾತಕ್ಕೆ ಸಮನಾಗಿತ್ತು. ಕ್ರಿಸ್ತನಿಗಿಂತ ಪೂರ್ವದ ವರ್ಷಗಳಲ್ಲಿ, ಇದು ಗ್ರೀಕರ ಬಯಸದೇ ಇರುವ ಮಗುವನ್ನು ತೆಗೆದುಕೊಂಡು ಹೋಗಿ ಪರ್ವತ ಪ್ರದೇಶಗಳಲ್ಲಿ ಪ್ರಾಣಿಗಳ ಮತ್ತು ವನ್ಯ ಮೃಗುಗಳಿಗೆ ಬಹಿರಂಗಪಡಿಸಿ ಬಿಟ್ಟು ಬರುವದು ಸರ್ವೆ ಸಾಮಾನ್ಯವಾಗಿತ್ತು, ಜೀವಿತ ಅಗ್ಗವಾಗಿತ್ತು. ಪೌಲನ ಕಾಲದಲ್ಲಿ ಒಬ್ಬ ಹೆಣ್ಣುಮಗು ಅನಾನೂಕೂಲವಾಗುತಿತ್ತು ಕಾರಣ ಗರ್ಭಪಾತ ಮಾಡಿಸಿಕೊಳ್ಳುವದಕ್ಕಿಂತ ಅದಕ್ಕೆ ಜನ್ಮ ನೀಡುವದು ಸುರಕ್ಷಿತ ಎಂದುಕೊಳ್ಳುತ್ತಿದ್ದರು. ಅವಳಿಗೆ ಮಗು ಜನನದ ಒಂದು ಗಂಟೆ ನಂತರ ಅಥವಾ ಒಂದು ಗಂಟೆಯ ಮೊದಲು ಅದು ವ್ಯಕ್ತಿಯಲ್ಲ ಎನ್ನುವದನ್ನು ಮನದಟ್ಟು ಮಾಡುತ್ತಿದ್ದರು.

ಲೈಂಗೀಕ ಅನೈತಿಕತೆ ಮತ್ತು ಮುಗ್ದಮಕ್ಕಳ ಸಾವು ನಿಕಟವಾದ ಸಂಬಂಧವನ್ನು ಹೊಂದಿದ್ದವು. ಹ್ಯಾಗೂ, ಲೈಂಗೀಕ ಸಂತೋಷ ಹೊಸ ಜೀವ ಅಸ್ತಿತ್ವದಲ್ಲಿ ಬರುವದಕ್ಕೆ ಸಂಭಂದವನ್ನು ಹೊಂದಿತ್ತು. ಗೌರವ, ಲೈಂಗೀಕತೆಯನ್ನು ವ್ಯಕ್ತಪಡಿಸುವದು ಮತ್ತು ಜೀವಿತ, ಇಬ್ಬರಿಗೂ ಉನ್ನತಿಗೆ ಎರಗತೊಡಗಿದವು ಅಥವಾ ಒಟ್ಟಾಗಿ ಪತನವಾಗತೊಡಗಿದವು. ಲೈಂಗೀಕತೆ ಕೇವಲ ತೃಪ್ತಿಗಾಗಿ, ಬೇಗನೇ ಅದು ತೃಪ್ತಿ ಪಡಿಸುವದನ್ನು ಕಳೆದುಕೊಳ್ಳುತ್ತದೆ ಲೈಂಗೀಕತೆಯನ್ನು ಸಮರ್ಪಣೆಯೊಂದಿಗೆ ಬದಲಿಸಿ ಇಡುವಾಗ ಆಧುನಿಕ ಲೋಕವು ಪ್ರಾಚೀನ ಮಾರ್ಗಗಳಿಗೆ ಹಿಂತಿರುಗುತ್ತದೆ.

# ವಿಸ್ತರಿತ ರೂಪರೇಖೆ

**I. ಪ್ರಸ್ತಾವನೆ: ಪೌಲ ಮತ್ತು ಸೋಸ್ಥೆನನಿಂದ ವಂದನೆಗಳು ಮತ್ತು (1:1-3)**

**II. ಗಮನ ಮತ್ತು ತಿದ್ದುಪಡಿಯ ಅವಶ್ಯಕತೆಯಿರುವ ಸಭೆಯಲ್ಲಿರುವ ಸಮಸ್ಯೆಗಳು (1:4-6:20)**

A. ಜ್ಞಾನ ಮತ್ತು ಪಂಥಗಳ ಕಲಹ ಅಸಮಂಜಸ (1:4-4:21)
   1. ಎಲ್ಲದರಲ್ಲಿಯೂ ಸಮೃದ್ಧಿ (1:4-9)
   2. ಸಭೆಯಲ್ಲಿರುವ ಪಂಗಡಗಳ ಕುರಿತಾಗಿ ಎಚ್ಚರಿಕೆ (1:10-17)
   3. ದೇವರ ಜ್ಞಾನ (1:18-31)
   4. ದೇವರ ಸಾಕ್ಷಿಯನ್ನು ಪ್ರಕಟಿಸುವದು (2:1-16)
      a. ಪೌಲನ ಸಂದೇಶವನ್ನು ಸಮರ್ಥನೆ ಮಾಡಿಕೊಂಡದ್ದು (2:1-5)
      b. ದೇವರ ಜ್ಞಾನ, ಮರೆಯಾಗಿಡಲ್ಪಟ್ಟದ್ದು ಮತ್ತು ಪ್ರಕಟಿಸಿದ್ದು (2:6-13)
      c. ಸ್ವಾಭಾವಿಕ ಮನುಷ್ಯ ಮತ್ತು ಆತ್ಮೀಕ ಮನುಷ್ಯ (2:14-16)
   5. ಪಂಗಡಗಳ ಗಂಭೀರತೆ (3:1-23)
      a. ವಿಭೇದ: ಶಾರೀರಕ ಫಲ (3:1-9)
      b. ದೇವರ ಕಟ್ಟಡ; ದೇವರ ದೇವಾಲಯ (3:10-17)
      c. "ಸಮಸ್ತವೂ ನಿಮ್ಮದು" (3:18-23)
   6. ಪೌಲನು ಸುವಾರ್ತೆಯ ಪಕ್ಷ ವಾದಿಸುವುದು ಮತ್ತು ಅಸಮ್ಮತಿ (4:1-21)
      a. ಅಹಂಕಾರದ ತೀರ್ಪಿನ Vs. ಸೇವಕತ್ವ (4:1-5)
      b. ಪೌಲನು Vs. ಕಲಹ ಪಕ್ಷದವರಾದ ಕೋರಿಂಥದವರು (4:6-13)
      c. ಪೌಲನು ಅವರ ನಂಬಿಕೆಗೆ "ತಂದೆ" (4:14-21)

B. ನೈತಿಕ ಐಕ್ಯತೆಗೆ ಕ್ರಿಸ್ತನ ಬೇಡಿಕೆಗಳು (5:1-6:20)
   1. ಸಹಿಷ್ಣತೆ ಮತ್ತು ಅನೈತಿಕತೆ (5:1-13)
      a. ಪಾಪದ ಶುದ್ಧೀಕರಣ (5:1-5)
      b. ಸಭೆಯ ಶುದ್ಧೀಕರಣ (5:6-8)
      c. ಸೂಚನೆಗಳ ಸ್ಪಷ್ಟೀಕರಣ (5:9-13)
   2. ಪಾಪಗಳನ್ನು ದೂರವಿರಿಸುವದು (6:1-20)
      a. ಸಹ ಕ್ರೈಸ್ತರ ವಿರುದ್ಧ ಮೊಕದ್ದಮೆಯನ್ನು ದೂರವಿರಿಸುವದು (6:1-11)
      b. ಲೈಂಗೀಕ ಪಾಪಗಳನ್ನು ದೂರವಿರಿಸುವದು (6:12-20)

**III. ಸಭೆಯಿಂದ ಪ್ರಶ್ನೆಗಳಿಗೆ ಉತ್ತರಗಳು (7:1-16:18)**

A. ವಿವಾಹದ ಕುರಿತಾಗಿ ಪ್ರಶ್ನೆಗಳು (7:1-40)
   1. ತೃಪ್ತಿ ಪಡಿಸಿಕೊಳ್ಳುವ ವಿಷಯ ಅಥವಾ ಸ್ವಾರ್ಥವನ್ನು ತ್ಯಜಿಸುವದು (7:1-7)
   2. “ಅವಿವಾಹಿತರಿಗೆ,” “ವಿಧವೆಯರಿಗೆ” ಮತ್ತು “ವಿವಾಹಿತರಿಗೆ” ಸಲಹೆಗಳು

(7:8-11)

3. ವಿವಾಹಿತ ವಿಶ್ವಾಸಿ ಅವಿವಾಹಿತ ವಿಶ್ವಾಸಿಗೆ ಸಲಹೆನೀಡುವದು (7:12-16)
4. "ಪ್ರತಿಯೊಬ್ಬರನ್ನು ದೇವರು ಕರೆದಿರುವ ಹಾಗೆ" (7:17-24)
5. ಕೊರಿಂಥದಲ್ಲಿರುವ ಅವಿವಾಹಿತರಿಗೆ ಸೂಚನೆಗಳು (7:25-40)

B. ವಿಗ್ರಹ ಆರಾಧನೆಯ ಕುರಿತು ಪ್ರಶ್ನೆಗಳು ಮತ್ತು ಇತರ ವಿಷಯಗಳು (8:1-11:34)
   1. ವಿಗ್ರಹಗಳಿಗೆ ಅರ್ಪಿಸಿದ ಮಾಂಸ ಮತ್ತು ತಿಳುವಳಿಕೆ ಮತ್ತು ಅದರ ಮಿತಿಗಳು (8:1-13)
   2. ಪೌಲನ ಉದಾಹರಣೆ (9:1-27)
      a. ಪೌಲನ ಅಪೊಸ್ತಲಿಕ ಹಕ್ಕುಗಳು (9:1, 2)
      b. ಪೌಲನ ವಯಕ್ತಿಕ ಹಕ್ಕುಗಳು (9:3-7)
      c. ಒಬ್ಬರ ಕೆಲಸದಿಂದ ಪ್ರಯೋಜನ ಪಡೆಯುವುದು (9:8-14)
      d. ಉತ್ತಮ ಪಾರುಗತ್ಯಗಾರನಾಗಿ (9:15-18)
      e. ಎಲ್ಲರಿಗೂ ದಾಸ (9:19-23)
      f. ಬಹುಮಾನಕ್ಕಾಗಿ ಹೋರಾಡುವದು (9:24-27)
   3. ಹಿಂದಿನದರಿಂದ ಕಲಿಯುವದು (10:1-33)
      a. "ಇಸ್ರಾಯೇಲ್ಯರನ್ನು ಜ್ಞಾಪಕಮಾಡಿಕೊಳ್ಳಿರಿ" (10:1-5)
      b. "ನಮಗಾಗಿ ಉದಾಹರಣೆಗಳು" (10:6-13)
      c. "ವಿಗ್ರಹಾರಾಧನೆಯಿಂದ ಓಡಿಹೋಗಿರಿ" (10:14-22)
      d. ನ್ಯಾಯ ಸಮ್ಮತವಾದ ಮತ್ತು ಲಾಭದಾಯಕವಾದ (10:23-30)
      e. ದೇವರ ಮಹಿಮೆಗಾಗಿ (10:31-33)
   4. ತಲೆಯನ್ನು ಮುಚ್ಚಿಕೊಳ್ಳುವದರ ಸಂಕೇತ (11:1-16)
   5. ವಿವಾಹವಿಲ್ಲದೇ ಜೊತೆಯಾಗಿರುವದರ ಅವಮಾನ (11:17-22)
   6. ಕರ್ತನ ಭೋಜನ (11:23-34)

C. ಆತ್ಮೀಕ ವರಗಳ ಕುರಿತು ಪ್ರಶ್ನೆಗಳು (12:1-14:40)
   1. ಐಕ್ಯತೆ ಮತ್ತು ಆತ್ಮೀಕ ವರಗಳು (12:1-31)
      a. "ಆತ್ಮನಿಂದ ಮಾತಾಡುವದು" (12:1-3)
      b. "ವಿವಧ ವರಗಳು" (12:4-11)
      c. "ದೇಹ ಒಂದೇ" (12:12, 13)
      d. "ಅನೇಕ ಸದಸ್ಯರು ಆದರೆ ಒಂದೇ ದೇಹ" (12:14-26)
      e. "ಇನ್ನೂ ಉತ್ತಮವಾದ ವರಗಳನ್ನು ಉತ್ಸಾಹದಿಂದ ಬಯಸಿರಿ" (12:27-31)
   2. ಅತ್ಯಂತ ಉತ್ತಮವಾದ ಮಾರ್ಗ, ಪ್ರೀತಿ (13:1-13)
      a. ಪ್ರೀತಿಯ ಮಹತ್ವ (13:1-3)
      b. ಪ್ರೀತಿಯ ಗುಣಲಕ್ಷಣಗಳು (13:4-7)

        c. ಪ್ರೀತಿಯ ಶಾಶ್ವತತೆ (13:8-12)
        d. ಸ್ಥಿರವಾದ ಸದ್ಗುಣಗಳು: "ನಂಬಿಕೆ ನಿರೀಕ್ಷೆ ಪ್ರೀತಿ" (13:13)
    3. ನಾಲಿಗೆಯ ಕುರಿತು ಪ್ರವಾದನೆ (14:1-40)
        a. ಪೌಲನ ವಿವರಣೆ (14:1-5)
        b. ಪೌಲನ ಉದಾಹರಣೆಗಳು (14:6-9)
        c. ಪೌಲನ ಅನ್ವಯಿಸುವಿಕೆಗಳು (14:10-12)
        d. ಸಭೆಯ ಜ್ಞಾನ ವೃದ್ಧಿಗೊಳಿಸುವದು (14:13-19)
        e. ಆರಾಧನೆ ಮತ್ತು ಸಮುದಾಯ ಪ್ರಜ್ಞೆ (14:20-25)
        f. ರಾಧನೆಯಲ್ಲಿ ಭಾಗವಹಿಸುವವರಿಗೆ ಸೂಚನೆಗಳು (14:26-33)
        g. ಆರಾಧನೆಯಲ್ಲಿ ಮಹಿಳೆಯರಿಗೆ ಸೂಚನೆಗಳು (14:34-36)
        h. ಆರಾಧಿಸುವವರಿಗೆ ಸಾಮಾನ್ಯ ಸೂಚನೆಗಳು (14:37-40)
D. ಸತ್ತವರ ಪುನರುತ್ಥಾನದ ಕುರಿತು ಪ್ರಶ್ನೆಗಳು (15:1-58)
    1. ಕ್ರಿಸ್ತನು ಎದಿದ್ದಾನೆ (15:1-11)
    2. ಖಾಲಿ ಸಮಾಧಿ (15:12-19)
    3. ಯಾವ ವಿಧದ ದೇಹ (15:20-28)
    4. ದೊಡ್ಡ "ಮಾರ್ಗ" (15:29-34)
    5. ಬೇರೆ ಬೇರೆ ವಿಧದ ದೇಹಗಳು (15:35-41)
    6. ಕೊನೆಯ ಆದಾಮನು (15:42-49)
    7. ಪುನರುತ್ಥಾನದ ರಹಸ್ಯ (15:50-57)
    8. ಉಪಸಂಹಾರ (15:58)
E. ಅಂತಿಮ ವಿಷಯಗಳು (16:1-18)
    1. ತಕ್ಷಣದ ಅವಶ್ಯಕತೆಗಳು ಮತ್ತು ಪ್ರಯಾಣದ ಯೋಜನೆಗಳು (16:1-9)
    2. ಕೊರಿಂಥದಲ್ಲಿರುವ ಸಭೆಯ ಸೇವೆ (16:10-18)

**IV. ಮುಕ್ತಾಯ (16:19-24)**

---

## ಟಿಪ್ಪಣಿಗಳು

[1]διασπορά (*diaspora*) ಡಿಸಪೊರಾ ಎಂಬ ಶಬ್ದವನ್ನು ಹೊಸ ಒಡಂಬಡಿಕೆಯಲ್ಲಿ ಮೂರು ಸಾರಿ ಉಪಯೋಗಿಸಲಾಗಿದೆ: ಯೋಹಾನ 7:35; ಯಾಕೋಬ 1:1 ಮತ್ತು 1 ಪೇತ್ರ 1:1ರಲ್ಲಿ. ಮುಂದಿನ ಎರಡು ವಿಷಯಗಳಲ್ಲಿ, ಪದವು ಚದುರಿಹೋದ ಕ್ರೈಸ್ತರನ್ನು ಉಲ್ಲೇಖಿಸುತ್ತದೆ. ಕ್ರೈಸ್ತರ ಸ್ವಂತದೇಶ ಪರಲೋಕ, ಅದೆ ಸಮಯದಲ್ಲಿ ಯೆಹೂದ್ಯರ ಸ್ವಂತ ದೇಶ ಕಾನಾನ ಆಗಿದೆ. [2]ಅದು ಹೆರೋಡೋಟಸ್ *ಪರಶಿಯನ್ ಯುದ್ಧಗಳು* 2.167 ಆಗಿತ್ತು. ಹೆರೋಡೋಟಸ್ (ಕ್ರಿ.ಪೂ. 484-425), ಒಬ್ಬ ಗ್ರೀಕ್ ಐತಿಹಾಸಿಕ ತಜ್ಞನು, ಹೇಲಿಕಾರನಸಸ್ಸ್‌ನಲ್ಲಿ (ಆಧುನಿಕ ಬೋಡ್ರಮ್, ಟರ್ಕಿ) ವಾಸಿಸುತ್ತಿದ್ದನು. ಅವನು "ಇತಿಹಾಸದ ಪಿತಾಮಹ" ಎಂದು ಹೆಸರುವಾಸಿಯಾಗಿದ್ದನು. ಯಾಕಂದರೆ ಈತನು ವಿಷಯಗಳನ್ನು ಕ್ರಮವಾಗಿ ಸಂಗ್ರಹಿಸಲು ಮತ್ತು ಅವುಗಳನ್ನು ಐತಿಹಾಸಿಕ ಕಥೆಗಳ ರೂಪದಲ್ಲಿ ವ್ಯವಸ್ಥಿತವಾಗಿ ಹೊಂದಿಸಲು ಬಲ್ಲವನಾಗಿದ್ದನು. ಅವನ ಗ್ರೀಕೋ-ಪರ್ಶಿಯನ್ ಯುದ್ಧಗಳ ಅವನ ದಾಖಲೆ ಆ ಸಮಯದಲ್ಲಿದ್ದ ಭೌಗೋಳಿಕ, ಜನರ ಮತ್ತು ಸಂಪ್ರದಾಯಗಳ ಬೆಲೆಯುಳ್ಳ

ಟಿಪ್ಪಣಿಗಳನ್ನು ಒಳಗೊಂಡಿತ್ತು. ಅವನ ಬರಹಗಳು ಇತರರು ಆತನಿಗೆ ನೀಡಿದ ಮಾಹಿತಿಯ ಆಧಾರದ ಮೇಲೆ ಇದ್ದದರಿಂದ, ಅವು ಖಚಿತವಾದವುಗಳಾಗಿರಲಿಲ್ಲ. ಹ್ಯಾಗೂ ಅವುಗಳು ಇತಿಹಾಸ ಮತ್ತು ಸತ್ಯವೇದದ ವಿದ್ಯಾರ್ಥಿಗಳಿಗೆ ಲಾಭದಾಯಕವಾಗಿದ್ದವು. [3]ರೋಮ ಸಾಮ್ರಾಜ್ಯದ ಪ್ರಾರಂಭವನ್ನು ಸಾಮಾನ್ಯವಾಗಿ ಕ್ರಿ.ಶ.ಪೂ. 27 ಎಂದು ದಾಖಲಿಸಲಾಗಿದೆ, ಆ ವರ್ಷದಲ್ಲಿ ಸೆನೆಟ್ ಆಕ್ಟಿವಿಯಸ್‌ನಿಗೆ "ಅಗಷ್ಟೀನ್" ಎಂಬ ತಲೆಬರಹವನ್ನು ನೀಡಿತು. ಗಲ್ಲಿಯೋನನ ಕುರಿತಾಗಿ ಉತ್ತಮವಾದ ಐತಿಹಾಸಿಕ ಮಾಹಿತಿ ಕ್ಲೌಸ್ ಹ್ಯಾಕರ್‌ನಿಂದ ಕೊಡಲ್ಪಟ್ಟಿತು. [4]"ಗಲ್ಲಿಯೋನ್" *ಯ್ಯಾಂಕರ್ ಸತ್ಯವೇದ ಶಬ್ದಕೋಶದಲ್ಲಿ, The Anchor Bible Dictionary*, ed. David Noel Freedman (New York: Doubleday, 1992), 2:901-3. [5]ದೇಮೇತ್ರಿ ದೇವಾಲಯದ ಅವಶೇಷಗಳು ಕೊರಿಂಥದ ಮೇರೆಯ ಹೊರಗೆ ಅಕ್ರೋಕೊರಿಂಥದ ಇಳಿಜಾರಿನಲ್ಲಿದ್ದವು. ಊಟದ ಕೋಣೆಗಳು ಮತ್ತು ಊಟಕ್ಕೆ ಸಂಬಂಧಿಸಿದ ಮಾನವ ಕೃತಿಗಳನ್ನು ಭೂಶೋಧಕರು ಬಯಲಿಗಿಟ್ಟಿದ್ದರು. (ನ್ಯಾನ್ಸಿ ಬೂಕಿಡಿಸ್ ಮತ್ತು ರೋನಾಲ್ಡ ಸ್ಟ್ರೂಡ್, *ದೇಮೇತ್ರಿ ಮತ್ತು ಪ್ರಾಚೀನ ಕೊರಿಂಥದಲ್ಲಿದ್ದ ಪೆರರಿಸಿಫೊನ್* [ಪ್ರಿನ್ಸಿಟೋನ್: ಅಮೇರಿಕನ್ ಸ್ಕೂಲ ಆಪ್ ಕ್ಲಾಸಿಕಲ್ ಸ್ಟಡೀಜ, 1987].) [6]ಕೊರಿಂಥದ ಶಿಲಾಲೇಖನಗಳು ಜಾನ್ ಹಾರವಿ ನೆಟ್ *ಅವರ ಶಿಲಾಲೇಖನ, 1926-1950, ಕೊರಿಂಥ*, ಸಂಪುಟ 8, ಪುಟ 3ರಲ್ಲಿ (ಪ್ರಿನ್ಸ್‌ಟೋನ್, ಎನ್. ಜೆ.: ಅಮೇರಿಕನ್ ಸ್ಕೂಲ ಆಪ್ ಕ್ಲಾಸಿಕಲ್ ಸ್ಟಡೀಜ್ ಸ್ಟಡೀಜ, 1966) ಮುದ್ರಿತವಾಗಿವೆ. [7]ಪ್ರಾಚೀನ ಪಟ್ಟಣಗಳು ಅರ್ಧ ದಶಲಕ್ಷ ಜನಸಂಖ್ಯೆಯನ್ನು ಹೊಂದಿದ್ದವು ಎಂಬ ಕಲ್ಪನೆ ಅಥವಾ ಪ್ರೆಷ್ಟೋನ್ ಡ್ಯೂನೆ ವಾರ್ಡನ್ ಮತ್ತು ರೋಗರ್ ಎಸ್. ಬಾಗನಲ್, "ದ ಫರಟೀ ಥೌಜಂಡ ಸಿಟಿಜನ್ಸ್ ಆಫ್ ಎಫೆಸ್ಸ," *ಸಂಪ್ರದಾಯಿಕ ಭಾಷಾಶಾಸ್ತ್ರ* 83ರಲ್ಲಿ ಅಂದಾಜು ಮಾಡಿದಂತೆ (ಜುಲೈ 1988): 220-23. [8]ಸ್ಟ್ರಾಬೋನ *ಭೂಗೋಳ* 8.6.20. [9]ಜೆರೋಮ ಮರ್ಫಿ-ಓ'ಕೊನ್ನೋರ, ಸಂತ ಪೌಲನ ಕೊರಿಂಥ ಪಠ್ಯ ಮತ್ತು ವಾಸ್ತುಶಿಲ್ಪ ಶಾಸ್ತ್ರ 3ರನೇ ಅವತರಣಿಕೆ ಮತ್ತು ಪ್ರಕಟನೆ (ಕಾಲೇಜವಿಲಲೆ, ಮಿನ್ನ.: ಲಿಟ್ರಜಿಕಲ್ ಪ್ರೆಸ್, 2002), 56. [10] ಸ್ಟ್ರಾಬೋನ ಭೂಗೋಳ 8.6.20.

[11]ಏಪಿದೌರಸ ಒಂದು ಚಿಕ್ಕ ಪಟ್ಟಣ ಸೆರೋನಿಕ್ ಕಣಿವೆಯ ಹತ್ತಿರ ಸ್ಥಾಪಿತವಾಗಿತ್ತು (ಕೊರಿಂಥನ ಆಗ್ನೇಯ ದಿಕ್ಕಿನಲ್ಲಿರುವ ಇಸ್ತಮಸ್) ಅಪೋಲೋನ ಮಗನಾದ ಎಸ್ಸಕಲೀಪಸ್ ಸ್ವಸ್ಥಮಾಡುವಾತನ ಜನ್ಮ ಸ್ಥಳವಾಗಿತ್ತು ಎಂಬ ನಂಬಿಕೆ ಇತ್ತು. ಮಹತ್ವದ ಎಸ್ಸಕಲೀಪಸ್‌ನನ್ನ ಸ್ಥಳವಾಗಿತ್ತು. ಇದು ಪ್ರಾಮುಖ್ಯವಾದ ಗ್ರೀಕ್ ಲೋಕದಲ್ಲಿ ಒಂದು ಪ್ರಾಮುಖ್ಯವಾದ ಸ್ವಸ್ಥತೆಯ ಕೇಂದ್ರವಾಗಿತ್ತು. ರೋಗಿಗಳು ಎನಿಕೊಮಿಟ್ರಿಯಾದಲ್ಲಿ 160 ಜನ ಮಲಗುವ ಕೋಣೆಯಲ್ಲಿ ರಾತ್ರಿಯನ್ನು ಕಳೆಯುತ್ತಿದ್ದರು, ದೇವರು ಅವರಿಗೆ ಕನಸುಗಳ ಮೂಲಕ ಅವರು ತಮ್ಮ ಆರೋಗ್ಯವನ್ನು ಹೇಗೆ ಮರಳಿ ಹೊಂದಿಕೊಳ್ಳಬೇಕು ಎಂಬುದನ್ನು ಪ್ರಕಟಿಸಿಕೊಳ್ಳುತ್ತಾನೆ ಎಂಬ ನಂಬಿಕೆಯಿತ್ತು. [12]ಸುಟೋನಿಯಸ್ *ಕ್ಲೌಡಿಯಸ್ ನ ಜೀವಿತ* 25.4. [13]F. F. Bruce, *Paul: Apostle of the Heart Set Free* (Grand Rapids, Mich.: Wm. B. Eerdmans Publishing Co., 1977), 251. [14]Suetonius *Life of Claudius* 25.4. [15]Dio Chrysostom *Discourses* 8.9. [16]C. K. Barrett, *A Commentary on the First Epistle to the Corinthians*, Harper's New Testament Commentaries (San Francisco: Harper & Row, 1968), v–vi.